# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : | 451(532) |
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು: | ಶ್ರೀ ವೈ.ಎ ನಾರಾಯಣ ಸ್ವಾಮಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸ ಬೇಕಾದ ದಿನಾಂಕ : | 08.12.2023 |
| ಉತ್ತರಿಸುವವರು: | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿರುವ ಒಟ್ಟು ಅಂಗವಿಕಲರುಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು) | 2011ರ ಜನಗಣತಿಯ ಪ್ರಕಾರ ರಾಜ್ಯದಲ್ಲಿರುವ ಒಟ್ಟು ಅಂಗವಿಕಲರುಗಳ ಸಂಖ್ಯೆ:13,24,205 ಇದ್ದು, ಸದ ಜನಗಣತಿಯಂತೆ ಜಿಲ್ಲಾವಾರು ಮಾಹಿತಿಯು ಮಾ ಲಭ್ಯವಿದ್ದು, ಅನುಬಂಧ-1ರಲ್ಲಿರಿಸಿದೆ. |
| ಆ | ಕಳೆದ ಮೂರು ವರ್ಷಗಳಲ್ಲಿ ಅಂಗವಿಕಲರುಗಳಿಗೆ ಯಾವ ಯಾವ ಸೌಲಭ್ಯಗಳನ್ನು ಸರ್ಕಾರದಿಂದ ನೀಡಲಾಗಿದೆ; (ತಾಲ್ಲೂಕುವಾರು ಮಾಹಿತಿ ನೀಡುವುದು) | ಕಳೆದ ಮೂರು ವರ್ಷಗಳಲ್ಲಿ ಅಂಗವಿಕಲರುಗಳಿ ನೀಡಲಾಗಿರುವ ಯೋಜನೆ/ಸೌಲಭ್ಯಗಳ ವಿವರಗಳನು ಅನುಬಂಧ-2ರಲ್ಲಿರಿಸಿದೆ<br>ಫಲಾನುಭವಿ ಆಧಾರಿತ ಯೋಜನೆಗಳ ಜಿಲ್ಲಾವಾ ಮಾಹಿತಿಯು ಮಾತ್ರ ಲಭ್ಯವಿದ್ದು, ಸದರಿ ಮಾಹಿತಿಯನು ಅನುಬಂಧ-3ರಲ್ಲಿರಿಸಿದೆ. |
| ಇ | ಅಂಗವಿಕಲರುಗಳಿಗೆ ಉಚಿತವಾಗಿ ನೀಡುವ ಸರ್ಕಾರದ ಯೋಜನೆಗಳ ಸೌಲಭ್ಯಗಳು ಯಾವುವು? ಸಂಪೂರ್ಣ ಮಾಹಿತಿ ನೀಡುವುದು | ಅಂಗವಿಕಲರುಗಳಿಗೆ ಸಂಪೂರ್ಣ ಉಚಿತವಾಗಿ ನೀಡುವ ಸರ್ಕಾರದ ಯೋಜನೆಗಳು ಹಾಗೂ ಸೌಲಭ್ಯಗ ವಿವರವನ್ನು ಅನುಬಂಧ-4ರಲ್ಲಿರಿಸಿದೆ |

**ಸಂಖ್ಯೆ: ಮಮಇ 220 ಪಿಹೆಚ್‌ಪಿ 2023**

(ಲಕ್ಷ್ಮಿ ಆರ್. ಹೆಬ್ಬಾಳಕರ್)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ ಸಚಿವರು.

## ಅನುಬಂಧ-1

## 2011ರ ಜನಗಣತಿಯ ಪ್ರಕಾರ ಜಿಲ್ಲಾವಾರು ವಿಕಲಚೇತನರ ಮಾಹಿತಿ

| ಕ್ರ. ಸಂ. | ಜಿಲ್ಲೆಗಳ ಹೆಸರು | ದೃಷ್ಟಿದೋಷ ವುಳ್ಳವರು | ಶ್ರವಣದೋಷ ವುಳ್ಳವರು | ದೈಹಿಕ ವಿಕಲಚೇತನರು | ಬುದ್ಧಿ ಮಾಂದ್ಯರು | ಮಾನಸಿಕ ಅಸ್ವಸ್ಥರು | ಇತರೆ ವಿಕಲ ಚೇತನರು | ಬಹುವಿಧ ವಿಕಲ ಚೇತನರು | ಒಟ್ಟು |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |
| 1 | ಬೆಂಗಳೂರು ನಗರ | 83910 | 78503 | 19732 | 15176 | 2707 | 63520 | 10682 | 274230 |
| 2 | ಬೆಂಗಳೂರು (ಗ್ರಾ) | 3857 | 4053 | 4568 | 1386 | 314 | 4217 | 1899 | 20294 |
| 3 | ಬೆಳಗಾಂ | 14349 | 19615 | 26489 | 8054 | 1553 | 14805 | 7729 | 92594 |
| 4 | ಬಳ್ಳಾರಿ | 8895 | 12515 | 11997 | 3770 | 704 | 9532 | 3482 | 50895 |
| 5 | ಬೀದರ್ | 7112 | 10629 | 10747 | 2519 | 488 | 7929 | 3213 | 42637 |
| 6 | ಬಿಜಾಪುರ | 6961 | 10674 | 10639 | 3351 | 511 | 7728 | 3669 | 43533 |
| 7 | ಬಾಗಲಕೋಟೆ | 7128 | 9767 | 12201 | 3155 | 500 | 6725 | 3703 | 43179 |
| 8 | ಚಿತ್ರದುರ್ಗ | 6196 | 8976 | 8373 | 2461 | 415 | 6589 | 2961 | 35971 |
| 9 | ಚಿಕ್ಕಮಗಳೂರು | 4360 | 4154 | 4947 | 1579 | 320 | 3750 | 2114 | 21224 |
| 10 | ಚಾಮರಾಜನಗರ | 3178 | 5674 | 4079 | 1377 | 325 | 3613 | 2218 | 20464 |
| 11 | ಧಾರವಾಡ | 6105 | 8061 | 10020 | 3074 | 777 | 5988 | 3196 | 37221 |
| 12 | ದಕ್ಷಿಣ ಕನ್ನಡ | 4094 | 5717 | 5881 | 3078 | 1927 | 3702 | 3696 | 28095 |
| 13 | ದಾವಣಗೆರೆ | 7027 | 10072 | 8760 | 3127 | 495 | 8358 | 2980 | 40819 |
| 14 | ಗುಲ್ಬರ್ಗಾ | 12752 | 19659 | 12485 | 4066 | 657 | 12948 | 3825 | 66392 |
| 15 | ಗದಗ | 3949 | 5190 | 7079 | 2014 | 350 | 4253 | 2279 | 25114 |
| 16 | ಹಾಸನ | 5289 | 7375 | 6907 | 2360 | 362 | 7240 | 2699 | 32232 |
| 17 | ಹಾವೇರಿ | 6203 | 6829 | 11332 | 3166 | 593 | 6053 | 3584 | 37760 |
| 18 | ಕೊಡಗು | 757 | 1734 | 1669 | 720 | 218 | 1478 | 793 | 7369 |
| 19 | ಕೋಲಾರ | 5278 | 8201 | 7321 | 2295 | 625 | 5732 | 2825 | 32277 |
| 20 | ಕೊಪ್ಪಳ | 5749 | 7575 | 9963 | 2351 | 495 | 5942 | 2524 | 34599 |
| 21 | ಮೈಸೂರು | 12484 | 17843 | 9812 | 3792 | 814 | 11189 | 4536 | 60470 |
| 22 | ಮಂಡ್ಯ | 7234 | 8240 | 8848 | 2625 | 481 | 5602 | 3198 | 36228 |
| 23 | ರಾಯಚೂರು | 7785 | 9555 | 8804 | 2604 | 556 | 6990 | 3072 | 39366 |
| 24 | ಶಿವಮೊಗ್ಗ | 4502 | 6087 | 6957 | 2701 | 582 | 5125 | 2881 | 28835 |
| 25 | ತುಮಕೂರು | 10198 | 14101 | 15260 | 3828 | 931 | 9335 | 5304 | 58957 |
| 26 | ಉತ್ತರ ಕನ್ನಡ | 3284 | 4406 | 6047 | 2184 | 905 | 3102 | 2665 | 22593 |
| 27 | ಉಡುಪಿ | 2317 | 3412 | 3448 | 1930 | 1136 | 2507 | 2172 | 16922 |
| 28 | ರಾಮನಗರ | 3113 | 4598 | 4850 | 1466 | 305 | 2982 | 1869 | 19183 |
| 29 | ಚಿಕ್ಕಬಳ್ಳಾಪುರ | 5445 | 6513 | 7051 | 2175 | 609 | 5388 | 2667 | 29848 |
| 30 | ಯಾದಗಿರಿ | 4659 | 6704 | 5716 | 1590 | 258 | 4399 | 1578 | 2490[illegible] |
| | ಒಟ್ಟು | 264170 | 326432 | 271982 | 93974 | 20913 | 246721 | 100013 | 13242[illegible] |

# ಅನುಬಂಧ – 2

## ವಿಕಲಚೇತನರಿಗಾಗಿ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳು/ ಯೋಜನೆಗಳು / ಸೇವಾ ಸೌಲಭ್ಯಗಳು

**(ಎ) ಶೈಕ್ಷಣಿಕ :-**

**1) ಶ್ರವಣದೋಷವುಳ್ಳ ಮಕ್ಕಳಿಗಾಗಿ ವಸತಿಯುತ ಶಾಲೆಗಳು:**

ಶ್ರವಣದೋಷವುಳ್ಳ ಮಕ್ಕಳಿಗಾಗಿ ಬೆಂಗಳೂರು ನಗರ, ಮೈಸೂರು, ಕಲಬುರ್ಗಿ, ಬಳ್ಳಾರಿ, ಬೆಳಗಾವಿ ಜಿಲ್ಲೆಗಳಲ್ಲಿ 4 ಕಿವುಡು ಮಕ್ಕಳ ವಸತಿ ಶಾಲೆಗಳನ್ನು ಇಲಾಖಾವತಿಯಿಂದ ನಡೆಸಲಾಗುತ್ತಿದೆ.ಈ ಶಾಲೆಗಳಲ್ಲಿ ಮಕ್ಕಳಿಗೆ ಉಚಿತ ವಸತಿ, ಊಟ ಮತ್ತು ಶಿಕ್ಷಣವನ್ನು ನೀಡಲಾಗುತ್ತಿದೆ.ಈ ಪೈಕಿ ಶ್ರವಣದೋಷವುಳ್ಳ ಹೆಣ್ಣು ಮಕ್ಕಳಿಗಾಗಿ ಬೆಳಗಾವಿಯಲ್ಲಿ ಪ್ರತ್ಯೇಕ ವಸತಿ ಶಾಲೆ ಇರುತ್ತದೆ.

**2. ಅಂಧ ಮಕ್ಕಳಿಗಾಗಿ ವಸತಿಯುತ ಶಾಲೆಗಳು**:

ಅಂಧ ಮಕ್ಕಳಿಗಾಗಿ ಕಲಬುರ್ಗಿ, ಮೈಸೂರು, ದಾವಣಗೆರೆ ಹಾಗೂ ಹುಬ್ಬಳ್ಳಿಯಲ್ಲಿ ವಿಶೇಷ ಶಾಲೆಗಳನ್ನು ನಡೆಸಲಾಗುತ್ತಿದೆ. ಈ ಶಾಲೆಗಳಲ್ಲಿ ದೃಷ್ಟಿದೋಷವುಳ್ಳ ಮಕ್ಕಳಿಗೆ ಉಚಿತ ಊಟ, ವಸತಿ ಮತ್ತು ಶಿಕ್ಷಣವನ್ನು ನೀಡಲಾಗುತ್ತಿದೆ.ಈ ಪೈಕಿ ದೃಷ್ಟಿದೋಷವುಳ್ಳ ಹೆಣ್ಣು ಮಕ್ಕಳಿಗಾಗಿ ದಾವಣಗೆರೆಯಲ್ಲಿ ಪ್ರತ್ಯೇಕ ವಸತಿ ಶಾಲೆ ಇರುತ್ತದೆ.

**3. ರಾಜ್ಯ ಮತ್ತು ಕೇಂದ್ರ ಸರ್ಕಾರದ ಅನುದಾನಿತ ವಿಶೇಷ ಶಾಲೆಗಳು 1982 ರಾಜ್ಯ ಅನುದಾನಿತ ವಿಶೇಷ ಶಾಲೆಗಳು**

1982ರ ರಾಜ್ಯ ಅನುದಾನ ಸಂಹಿತೆಯಡಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ 34 ವಿಶೇಷ ಶಾಲೆ/ ತರಬೇತಿ ಕೇಂದ್ರಗಳನ್ನು ದೈಹಿಕ, ಅಂಧ, ಶ್ರವಣದೋಷ ಹಾಗೂ ಬುದ್ಧಿಮಾಂದ್ಯ ಮಕ್ಕಳಿಗಾಗಿ ನಡೆಸಲಾಗುತ್ತಿದೆ. ರಾಜ್ಯ ಸರ್ಕಾರದಿಂದ ಅನುದಾನವನ್ನು ಆಯಾ ಜಿಲ್ಲೆಯ ಜಿಲ್ಲಾ ಪಂಚಾಯತ್ ಮೂಲಕ ಬಿಡುಗಡೆ ಮಾಡಲಾಗುತ್ತಿದೆ.

**(ಅ) ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ಯೋಜನೆ:**

ಈ ಯೋಜನೆಯಡಿ ಬುದ್ಧಿಮಾಂದ್ಯ (ಸೆರಬ್ರಲ್ ಪಾಲ್ಸಿ, ಆಟಿಸಂ), ದೃಷ್ಟಿದೋಷ, ಶ್ರವಣದೋಷವುಳ್ಳ ಮಕ್ಕಳಿಗಾಗಿ ವಸತಿಯುತ ಹಾಗೂ ವಸತಿರಹಿತ ಶಾಲೆಗಳು ಸೇರಿದಂತೆ ಒಟ್ಟು 141 ವಿಶೇಷ ಶಾಲೆಗಳು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಯುತ್ತಿವೆ. 2022-23ನೇ ಸಾಲಿನಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸುತ್ತಿರುವ ವಿಶೇಷ ಶಾಲೆಗಳ ನಿರ್ವಹಣೆಗೆ ನೀಡಲಾಗುತ್ತಿದ್ದ ಅನುದಾನವನ್ನು ಶೇ.50%ರಷ್ಟು ಹೆಚ್ಚಿಸಿ ಸರ್ಕಾರದ ಆದೇಶ ಸಂಖ್ಯೆ: ಮಮಇ:153:ಪಿಹೆಚ್‌ಪಿ:2020, ದಿ:14.09.2022ರಲ್ಲಿ ಆದೇಶಿಸಲಾಗಿದೆ. ವಿವರಗಳು ಕೆಳಕಂಡಂತಿದೆ.

| ಶಾಲೆಗಳ ವಿವರ | ಈ ಹಿಂದೆ ನೀಡಲಾಗುತ್ತಿದ್ದ ಅನುದಾನ (ರೂ.ಗಳಲ್ಲಿ) | ಶೇ.50ರಷ್ಟು ಪರಿಷ್ಕರಿಸಿರುವ ಅನುದಾನ (ರೂ.ಗಳಲ್ಲಿ) |
|---|---|---|
| ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ | 6800 | 10200 |
| ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ಶಾಲೆ | 6000 | 9000 |
| ಅಂಧ/ಕಿವುಡ ಮಕ್ಕಳ ವಸತಿಯುತ ಶಾಲೆ | 6200 | 9300 |
| ಅಂಧ/ಕಿವುಡ ಮಕ್ಕಳ ವಸತಿರಹಿತ ಶಾಲೆ | 5200 | 7800 |
| ಆಟಿಸಂ ಮಕ್ಕಳ ಹಗಲು ಯೋಗ ಕ್ಷೇಮ ಕೇಂದ್ರ | 10000 | 15000 |

ಈ ಅನುದಾನದಲ್ಲಿ ಶಿಕ್ಷಕರ ಗೌರವಧನ, ಮಕ್ಕಳ ಆಹಾರ ವೆಚ್ಚ, ಕಟ್ಟಡದ ಬಾಡಿಗೆ ಹಾಗೂ ನಿರ್ವಹಣಾ ವೆಚ್ಚ, ಸಮವಸ್ತ್ರ, ವೈದ್ಯಕೀಯ ವೆಚ್ಚ ಹಾಗೂ ಸಾದಿಲ್ವಾರು ವೆಚ್ಚಗಳು ಒಳಗೊಂಡಿರುತ್ತವೆ.

**(ಆ) ಕೇಂದ್ರ ಸರ್ಕಾರದ ದೀನ್‌ದಯಾಳ್ ಪುನರ್ವಸತಿ ಯೋಜನೆ:-** ಸದರಿ ಯೋಜನೆಯಡಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ 02 ವಿಶೇಷ ಶಾಲೆಗಳು ಮತ್ತು 1 ಪುನರ್ವಸತಿ ಕೇಂದ್ರ ನಡೆಯುತ್ತಿದ್ದು, ಸದರಿ ವಿಶೇಷ ಶಾಲೆ ಹಾಗೂ ಪುನರ್ವಸತಿ ಕೇಂದ್ರಗಳಿಗೆ ಕೇಂದ್ರ ಸರ್ಕಾರದಿಂದ ಶೇ.90ರಷ್ಟು ಅನುದಾನವನ್ನು ಮಂಜೂರು ಮಾಡಲಾಗುತ್ತಿದ್ದು, ಉಳಿದ ಶೇ.10ರಷ್ಟು ವೆಚ್ಚವನ್ನು ಸಂಸ್ಥೆಯವರು ಭರಿಸಬೇಕಾಗಿರುತ್ತದೆ.

**4. ಅಂಗವಿಕಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹನ ಧನ:**

ಈ ಯೋಜನೆಯಡಿ ಒಂದನೇ ತರಗತಿಯಿಂದ ಸ್ನಾತಕೋತ್ತರ ಪದವಿಯವರೆಗೆ ವ್ಯಾಸಂಗ ಮಾಡುತ್ತಿರುವ ಅರ್ಹ ವಿಕಲಚೇತನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ಆಯಾ ಜಿಲ್ಲಾ ಕಛೇರಿಗಳ ಮೂಲಕ ಮಂಜೂರು ಮಾಡಲಾಗುತ್ತಿದೆ. 2001-02ನೇ ಸಾಲಿನಿಂದ ಈ ಯೋಜನೆಯ ಫಲಾನುಭವಿಗಳಿಗೆ ಆದಾಯ ಮಿತಿಯಿಂದ ವಿನಾಯಿತಿಗೊಳಿಸಲಾಗಿದೆ.

**5. ಪ್ರತಿಭಾವಂತ ಅಂಗವಿಕಲ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ಯೋಜನೆ:**

ಸಾರ್ವತ್ರಿಕ ಪರೀಕ್ಷೆಗಳಲ್ಲಿ ಶೇಕಡ 60 ಕ್ಕಿಂತಲೂ ಹೆಚ್ಚಿನ ಅಂಕಗಳನ್ನು ಪಡೆದ ಪ್ರತಿಭಾನ್ವಿತ ವಿಕಲಚೇತನ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡುವ ಯೋಜನೆ ಇದಾಗಿದೆ. ಈ ಯೋಜನೆಯನ್ನು 2001-02ನೇ ಸಾಲಿನಿಂದ ಬಿ.ಎಡ್, ಎಂ.ಎಡ್. ಮತ್ತು ಟಿ.ಸಿ.ಹೆಚ್. ವಿದ್ಯಾರ್ಥಿಗಳಿಗೂ ವಿಸ್ತರಿಸಲಾಗಿದೆ.

**6. ಉನ್ನತ ಶಿಕ್ಷಣ ಪಡೆಯುವ ವಿಕಲಚೇತನರಿಗೆ ಶುಲ್ಕ ಮರುಪಾವತಿ:**

ಉನ್ನತ ಶಿಕ್ಷಣ ಪಡೆಯುವ ವಿಕಲಚೇತನರಿಗೆ ಎಸ್.ಎಸ್.ಎಲ್.ಸಿ ನಂತರ ಉನ್ನತ ಶಿಕ್ಷಣ, ವೃತ್ತಿ ಶಿಕ್ಷಣ, ತಾಂತ್ರಿಕ ಶಿಕ್ಷಣ, ಸ್ನಾತಕೋತ್ತರ, ಔದ್ಯೋಗಿಕ ಶಿಕ್ಷಣಗಳಿಗೆ ನಿಯಮಾನುಸಾರ ಆಯ್ಕೆಯಾಗುವ ವಿದ್ಯಾರ್ಥಿಗಳಿಗೆ ಸರ್ಕಾರವು ನಿಗದಿಪಡಿಸಿರುವ ಪರೀಕ್ಷಾ ಶುಲ್ಕ, ಬೋಧನಾ ಶುಲ್ಕ, ಪ್ರಯೋಗಾಲಯ ಶುಲ್ಕ, ಕ್ರೀಡಾ ಶುಲ್ಕ ಹಾಗೂ ಗ್ರಂಥಾಲಯ ಶುಲ್ಕಗಳನ್ನು ಮರುಪಾವತಿಸುವ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಸೌಲಭ್ಯ ಪಡೆಯುವ ವಿದ್ಯಾರ್ಥಿಗಳಿಗೆ ಯಾವುದೇ ಆದಾಯಮಿತಿ ಇರುವುದಿಲ್ಲ. ವೈದ್ಯಕೀಯ ಮಂಡಳಿಯವರು ಶಿಫಾರಸ್ಸು ಮಾಡಿರುವ ವಿಕಲಚೇತನ ಅಭ್ಯರ್ಥಿಗಳು ಮಾತ್ರ ಈ ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ.

**7. ಬ್ರೈಲ್ ಮುದ್ರಣಾಲಯ:**

ದೃಷ್ಟಿದೋಷವುಳ್ಳ ಮಕ್ಕಳಿಗೆ ಬೇಕಾಗುವ ಬ್ರೈಲ್ ಪುಸ್ತಕಗಳನ್ನು ಮುದ್ರಿಸಿ ಸಂಬಂಧಪಟ್ಟ ಅಂಧರ ಶಾಲೆಗಳಿಗೆ ಮೈಸೂರಿನಲ್ಲಿರುವ ಬ್ರೈಲ್ ಮುದ್ರಣಾಲಯದ ಮೂಲಕ ಉಚಿತವಾಗಿ ಸರಬರಾಜು ಮಾಡಲಾಗುತ್ತಿದೆ.

**8. ವಿಶೇಷ ಶಿಕ್ಷಣ ತರಬೇತಿ ಕೇಂದ್ರ ಯೋಜನೆ:**

ದೃಷ್ಟಿದೋಷವುಳ್ಳ ಹಾಗೂ ಶ್ರವಣದೋಷವುಳ್ಳ ವಿದ್ಯಾರ್ಥಿಗಳಿಗೆ ಬೋಧಿಸುವ ಶಿಕ್ಷಕರಿಗೆ ವಿಶೇಷ ಶಿಕ್ಷಣ ನೀಡಲು ತಲಾ ಒಂದರಂತೆ ವಿಶೇಷ ಶಿಕ್ಷಕರ ತರಬೇತಿ ಕೇಂದ್ರವನ್ನು ಮೈಸೂರಿನಲ್ಲಿ ನಡೆಸುತ್ತಿದ್ದು,

**9. ಮಾನಸಿಕ ಅಸ್ವಸ್ಥ, ಸೆರಬ್ರಲ್ ಪಾಲ್ಸಿ, ಆಟಿಸಂ ಮಕ್ಕಳ ಹಗಲು ಯೋಗಕ್ಷೇಮ ಕೇಂದ್ರಗಳು:**

ಸೆರಬ್ರಲ್ ಪಾಲ್ಸಿ, ಆಟಿಸಂ, ಮಾನಸಿಕ ಅಸ್ವಸ್ಥ ಹಾಗೂ ತೀವ್ರತರದ ಅಂಗವೈಕಲ್ಯತೆ ಹೊಂದಿರುವ ಮೂರ ರಿಂದ 25 ವರ್ಷದ ಒಳಗಿನ ಮಕ್ಕಳಿಗಾಗಿ 02 ಹಗಲು ಯೋಗಕ್ಷೇಮ ಕೇಂದ್ರಗಳನ್ನು ಬೆಂಗಳೂರು ನಗರ ಜಿಲ್ಲೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸುತ್ತಿದ್ದು, ಪ್ರತಿ ಕೇಂದ್ರದಲ್ಲಿ 25 ಮಕ್ಕಳನ್ನು ದಾಖಲಿಸಲು ಅವಕಾಶವಿದ್ದು, ಪ್ರತಿ ಮಗುವಿಗೆ ಮಾಸಿಕ ರೂ. 15,000/-ಗಳಂತೆ ವಾರ್ಷಿಕ 37.50 ಲಕ್ಷಗಳನ್ನು ಮಂಜೂರು ಮಾಡಲಾಗುತ್ತಿದ್ದು.

## ಉದ್ಯೋಗ ಮತ್ತು ತರಬೇತಿ:

**1. ಅಂಗವಿಕಲ ಪುರುಷ ಹಾಗೂ ಮಹಿಳೆಯರ ವಸತಿನಿಲಯ:**

ಬೆಂಗಳೂರಿನಲ್ಲಿ ಮಹಿಳಾ ಮತ್ತು ಪುರುಷ ಅಂಗವಿಕಲ ನೌಕರರು ಮತ್ತು ಪ್ರಶಿಕ್ಷಣಾರ್ಥಿಗಳಿಗೆ ಪ್ರತ್ಯೇಕವಾದ ಒಂದೊಂದು ವಸತಿ ನಿಲಯವನ್ನು ನಡೆಸಲಾಗುತ್ತಿದೆ. ಪುರುಷರ ವಸತಿ ನಿಲಯದಲ್ಲಿ 50 ನಿವಾಸಿಗಳು ಹಾಗೂ ಮಹಿಳೆಯರ ವಸತಿ ನಿಲಯದಲ್ಲಿ 50 ನಿವಾಸಿಗಳನ್ನು ದಾಖಲಿಸಲು ಅವಕಾಶವಿದೆ. 2022-23ನೇ ಸಾಲಿನಲ್ಲಿ ಪುರುಷರ ವಸತಿ ನಿಲಯದಲ್ಲಿ 40 ನಿವಾಸಿಗಳು, ಮಹಿಳೆಯರ ವಸತಿ ನಿಲಯದಲ್ಲಿ 8 ನಿವಾಸಿಗಳು ಸೌಲಭ್ಯ ಪಡೆದಿರುತ್ತಾರೆ.

**2. ಉದ್ಯೋಗಸ್ಥ ವಿಕಲಚೇತನ ಮಹಿಳೆಯರಿಗೆ ವಸತಿ ನಿಲಯಗಳು:**

ಅಂಗವಿಕಲ ಉದ್ಯೋಗಸ್ಥ ಮಹಿಳೆಯರಿಗಾಗಿ ಹಾಗೂ ವಿದ್ಯಾರ್ಥಿನಿ/ತರಬೇತಾರ್ಥಿಗಳಿಗೆ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಜಿಲ್ಲಾ ಕೇಂದ್ರಗಳಲ್ಲಿ 26 ಮಹಿಳಾ ವಸತಿ ನಿಲಯಗಳನ್ನು ನಡೆಸುತ್ತಿದ್ದು, ಸದರಿ ವಸತಿ ನಿಲಯದಲ್ಲಿ ಉದ್ಯೋಗಸ್ಥ ವಿಕಲಚೇತನ ಮಹಿಳೆಯರಿಗೆ ಹಾಗೂ ವಿದ್ಯಾರ್ಥಿನಿಯರಿಗೆ ವಸತಿ ಸೌಲಭ್ಯವನ್ನು ಕಲ್ಪಿಸಲಾಗಿದೆ. ಈ ವಸತಿ ನಿಲಯದಲ್ಲಿ ವಿದ್ಯಾರ್ಥಿನಿಯರು ಹಾಗೂ ತರಬೇತಿದಾರರಿಗೆ ಉಚಿತ ಊಟದ ವ್ಯವಸ್ಥೆಯಿದ್ದು, ಉದ್ಯೋಗಸ್ಥ ಮಹಿಳೆಯರು ಮಾಸಿಕ 600/-ಗಳನ್ನು ಪಾವತಿಸಬೇಕಾಗಿರುತ್ತದೆ.

**3. ಗ್ರಾಮೀಣ ಪುನರ್ವಸತಿ ಯೋಜನೆ:**

ಪ್ರತಿ ಗ್ರಾಮ ಪಂಚಾಯತಿ ಅಡಿಯಲ್ಲಿ ಎಸ್.ಎಸ್.ಎಲ್.ಸಿ. ಉತ್ತೀರ್ಣ/ ಅನುತ್ತೀರ್ಣರಾದ ಸಮರ್ಥ ವಿಕಲಚೇತನರನ್ನು ಗ್ರಾಮೀಣ ಪುನರ್ವಸತಿ ಕಾರ್ಯಕರ್ತರೆಂದು ಹಾಗೂ ತಾಲ್ಲೂಕು ಪಂಚಾಯಿತಿ ಕಚೇರಿಯಲ್ಲಿ ಸ್ಥಳೀಯ ಸಮರ್ಥ ಪದವೀಧರ ವಿಕಲಚೇತನರೊಬ್ಬರನ್ನು ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರೆಂದು, ಸ್ಥಳೀಯ ನಗರ ಪ್ರದೇಶಗಳಲ್ಲಿ ನಗರ ಪುನರ್ವಸತಿ ಕಾರ್ಯಕರ್ತರೆಂದು ಮತ್ತು ನಿರ್ದೇಶನಾಲಯದಲ್ಲಿ ರಾಜ್ಯ ಸಂಯೋಜಕರನ್ನು ಗೌರವಧನ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅವಕಾಶವಿದೆ. ಈ ಕಾರ್ಯಕರ್ತರ ಮೂಲಕ ವಿಕಲಚೇತನರಿಗೆ ಎಲ್ಲಾ ಸೇವಾ ಸೌಲಭ್ಯಗಳನ್ನು ಅವರಿರುವ ಸ್ಥಳಗಳಲ್ಲಿಯೇ ವಿಕಲಚೇತನರ ಮೂಲಕವೇ ತಲುಪಿಸಲಾಗುವುದು.

ಜಿಲ್ಲಾ ಸಂಯೋಜಕರಿಗೆ ನೀಡಲಾಗುತ್ತಿದ್ದ ಗೌರವಧನ ರೂ.13,000/-ಗಳಿಂದ ರೂ.19,000/-ಗಳಿಗೆ ಹಾಗೂ ರಾಜ್ಯ ಸಂಯೋಜಕರಿಗೆ ನೀಡಲಾಗುತ್ತಿದ್ದ ಗೌರವಧನ ರೂ.26,000/-ಗಳಿಂದ ರೂ.38,000/-ಗಳಿಗೆ ಹೆಚ್ಚಿಸಲಾಗಿದೆ.

**4. ಮರಣ ಪರಿಹಾರ ನಿಧಿ ಯೋಜನೆ:**

ಈ ಯೋಜನೆಯಡಿ ಕಾರ್ಯಕರ್ತರು ನಿಧನಹೊಂದಿದ್ದಲ್ಲಿ ರೂ.50,000/-ಗಳ ಪರಿಹಾರ ಧನ ನೀಡಲಾಗುತ್ತಿದೆ. 2023-24ನೇ ಸಾಲಿನಲ್ಲಿ ರೂ.50,000/-ಗಳಿಂದ ರೂ.1,00,000/-ಗಳಿಗೆ ಹೆಚ್ಚಿಸಿ ಆದೇಶಿಸಲಾಗಿರುತ್ತದೆ.

**5 ಆಧಾರ ಯೋಜನೆ :**

ವಿಕಲಚೇತನರು ಸ್ವಯಂ ಉದ್ಯೋಗ ಕೈಗೊಂಡು ಜೀವನ ಸಾಗಿಸಲು ಅನುಕೂಲವಾಗುವಂತೆ ಆಧಾರ ಸಾಲ ಯೋಜನೆಯನ್ನು ಅನುಷ್ಠಾನಗೊಳಿಸ ಲಾಗುತ್ತಿದೆ. ಈ ಯೋಜನೆಯಡಿ ಶೇ.50ರಷ್ಟು ಬ್ಯಾಂಕ್ ಸಾಲ ಮತ್ತು ಶೇ.50ರಷ್ಟು ಸಹಾಯಧನವನ್ನು ಇಲಾಖೆಯಿಂದ ನೀಡಲಾಗುತ್ತದೆ.

## ಆರ್ಥಿಕ ಮತ್ತು ಸಾಮಾಜಿಕ ಭದ್ರತಾ ಯೋಜನೆಗಳು:

**1. ಸಮಾಜ ಸೇವಾ ಸಂಕೀರ್ಣ:**

ನಿರ್ಗತಿಕ ಬುದ್ಧಿಮಾಂದ್ಯ ಪುರುಷರಿಗಾಗಿ ಸಮಾಜ ಸೇವಾ ಸಂಕೀರ್ಣ ಸಂಸ್ಥೆಯು ಬೆಂಗಳೂರಿನಲ್ಲಿ ಸರ್ಕಾರದ ವತಿಯಿಂದ ನಡೆಯುತ್ತಿದ್ದು, ಈ ಸಂಸ್ಥೆಯಲ್ಲಿ ಉಚಿತ ಊಟ, ವಸತಿ, ವೈದ್ಯಕೀಯ ಸೌಲಭ್ಯ, ಸಂರಕ್ಷಣೆ ಒದಗಿಸಲಾಗುತ್ತಿದೆ.

**2. ಮಂದಮತಿ ಮಹಿಳೆಯರ ಅನುಪಾಲನಾ ಗೃಹ:**

18 ವರ್ಷ ಮೇಲ್ಪಟ್ಟ ನಿರ್ಗತಿಕ ಮಹಿಳಾ ಬುದ್ಧಿಮಾಂದ್ಯರಿಗೆ ಉಚಿತ ಊಟ, ವಸತಿ, ವೈದ್ಯಕೀಯ ಸೌಲಭ್ಯ ಮತ್ತು ಸಂರಕ್ಷಣೆ ಒದಗಿಸುವ ಉದ್ದೇಶದಿಂದ ಮಂದಮತಿ ಮಹಿಳೆಯರ ಅನುಪಾಲನಾ ಗೃಹಗಳನ್ನು ಬೆಂಗಳೂರು ನಗರ ಹಾಗೂ ಹುಬ್ಬಳ್ಳಿಯಲ್ಲಿ ಇಲಾಖಾವತಿಯಿಂದ ನಡೆಸಲಾಗುತ್ತಿದೆ.

**3. ಮಾನಸಿಕ ಅಸ್ವಸ್ಥರಿಗೆ ಮಾನಸ ಕೇಂದ್ರಗಳು:**

ಮಾನಸಿಕ ಅಸ್ವಸ್ಥರಿಗಾಗಿ ಬೆಂಗಳೂರು, ಬೆಳಗಾವಿ, ರಾಯಚೂರು, ಬಳ್ಳಾರಿ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಮಾನಸ ಕೇಂದ್ರಗಳನ್ನು ಪ್ರಾರಂಭಿಸಲು ಸರ್ಕಾರ ಮಂಜೂರಾತಿಯನ್ನು ನೀಡಿರುತ್ತದೆ. ರಾಜ್ಯ ಉಚ್ಚ ನ್ಯಾಯಾಲಯ ಮತ್ತು ಅಧೀನ ನ್ಯಾಯಾಲಯಗಳಿಂದ ಆದೇಶಿಸಲ್ಪಡುವ ಮಾನಸಿಕ ಅಸ್ವಸ್ಥರನ್ನು ಹಾಗೂ ರಸ್ತೆಗಳಲ್ಲಿ ಓಡಾಡುವ ನಿರ್ಗತಿಕ ಮಾನಸಿಕ ಅಸ್ವಸ್ಥರನ್ನು ಈ ಕೇಂದ್ರಗಳಲ್ಲಿ ನಿರ್ದಿಷ್ಟ ವೈದ್ಯಕೀಯ ಪ್ರಾಧಿಕಾರದ ಆದೇಶದ ಮೇರೆಗೆ ದಾಖಲಿಸಲು ಅವಕಾಶವಿರುತ್ತದೆ. ಈ ಕೇಂದ್ರಗಳಲ್ಲಿ ಫಲಾನುಭವಿಗಳಿಗೆ ಉಚಿತ ಊಟ, ವಸತಿ, ವೈದ್ಯಕೀಯ ಶುಶ್ರೂಷೆ, ವೈದ್ಯಕೀಯ ಸಲಹೆ(ಕೌನ್ಸಲಿಂಗ್) ಸೌಲಭ್ಯವನ್ನು ನೀಡಲಾಗುತ್ತಿದ್ದು, ಇವು ಅಲ್ಪಾವಧಿ ಕೇಂದ್ರಗಳಾಗಿರುತ್ತವೆ. ಪ್ರಸ್ತುತ ಬೆಂಗಳೂರು ನಗರ ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ಮಾತ್ರ ಮಾನಸ ಕೇಂದ್ರಗಳು ನಡೆಯುತ್ತಿವೆ.

**4. ಬುದ್ಧಿಮಾಂದ್ಯ ಮಕ್ಕಳ ಪೋಷಕರಿಗೆ ವಿಮಾ ಯೋಜನೆ:**

ಬುದ್ಧಿಮಾಂದ್ಯ ಮಕ್ಕಳ/ವ್ಯಕ್ತಿಗಳ ತಂದೆ: ತಾಯಿ: ಪೋಷಕರ ವಿಮಾ ಯೋಜನೆಯನ್ನು ಭಾರತೀಯ ಜೀವ ವಿಮಾ ನಿಗಮದ ಮೂಲಕ ಯೋಜನೆಯನ್ನು ಅನುಷ್ಠಾನಗೊಳಿಸ ಲಾಗುತ್ತಿದ್ದು, ಬುದ್ಧಿಮಾಂದ್ಯ ಮಕ್ಕಳ/ವ್ಯಕ್ತಿಗಳ ತಂದೆ:ತಾಯಿ: ಪೋಷಕರು ಮರಣ ಹೊಂದಿದ ನಂತರ ಬುದ್ಧಿಮಾಂದ್ಯ ಮಕ್ಕಳ ಜೀವನ ನಿರ್ವಹಣೆಗಾಗಿ ರೂ.20,000/-ಗಳ ಪರಿಹಾರ ಧನವನ್ನು ಬುದ್ಧಿಮಾಂದ್ಯ ವ್ಯಕ್ತಿಗಳ ನಾಮ ನಿರ್ದೇಶಿತರಿಗೆ ಪಾವತಿಸಲಾಗುತ್ತಿದೆ.

**5. ವಿಕಲಚೇತನ ವ್ಯಕ್ತಿಗಳನ್ನು ಸಾಮಾನ್ಯರು ಮದುವೆಯಾದಲ್ಲಿ ಪ್ರೋತ್ಸಾಹ ಧನ ನೀಡುವ ಯೋಜನೆ:**

ವಿಕಲಚೇತನ ಯುವಕ/ಯುವತಿಯರನ್ನು ವಿವಾಹವಾಗುವ ಸಾಮಾನ್ಯ ಯುವಕ/ ಯುವತಿಯರಿಗೆ ನಿರಂತರವಾಗಿ ಮಾಸಿಕ ಆದಾಯ ದೊರಕಿಸಲು ವಿಕಲಚೇತನ ವ್ಯಕ್ತಿಯ ಹೆಸರಿನಲ್ಲಿ ರೂ.50,000/-ಗಳನ್ನು 05 ವರ್ಷದ ಅವಧಿಗೆ ಹೂಡಿಕೆಯ ರೂಪದಲ್ಲಿ ನೀಡಲಾಗುವುದು. ಅದರಿಂದ ಬರುವ ಬಡ್ಡಿ ಹಣವನ್ನು ಫಲಾನುಭವಿಗಳು ಉಪಯೋಗಿಸಬಹುದು ಹಾಗೂ 05 ವರ್ಷಗಳ ನಂತರ ಠೇವಣಿ ಮೊತ್ತವನ್ನು ವಾಪಸ್ಸು ಪಡೆಯಬಹುದು ಅಥವಾ ಮುಂದುವರೆಸಲು ಸಹ ಅವಕಾಶವಿರುತ್ತದೆ.

**6. ಅಂಧ ಮಹಿಳೆಯರಿಗೆ ಜನಿಸುವ ಮಕ್ಕಳಿಗೆ ಆರೈಕೆ ಭತ್ಯೆ ಒದಗಿಸುವ ಯೋಜನೆ :**

ಅಂಧ ಮಹಿಳೆಯರು ಮಗುವಿಗೆ ಜನ್ಮ ನೀಡಿದಾಗ ಆ ಮಗುವನ್ನು ಇತರೆ ಸಾಮಾನ್ಯ ತಾಯಂದಿರಂತೆ ಆರೈಕೆ ಮಾಡುವುದು ಕಷ್ಟಕರವಾಗಿರುತ್ತದೆ. ಇಂತಹ ಅಂಧ ಮಹಿಳೆಯರಿಗೆ ಜನಿಸುವ ಮಕ್ಕಳಿಗೆ ಆರೈಕೆ ಮಾಡಲು ಆಯಾ ಸೇವೆ, ಆರೋಗ್ಯ ಪಾಲನೆ, ಪೌಷ್ಠಿಕ ಆಹಾರ, ಔಷಧೋಪಚಾರಗಳಿಗೆ ಮಾಹೆಯಾನ ರೂ.2,000/- ದಂತೆ 5 ವರ್ಷಗಳ ಅವಧಿಗೆ ಸಹಾಯಧನವನ್ನು ನೀಡಲಾಗುತ್ತಿದೆ. ಈ ಸೌಲಭ್ಯವನ್ನು ಕನಿಷ್ಠ 2 ಮಕ್ಕಳವರೆಗೆ ಪಡೆಯಬಹುದಾಗಿದೆ.

**7. ನಿರುದ್ಯೋಗ ಭತ್ಯೆ :**

ಎಸ್. ಎಸ್. ಎಲ್. ಸಿ. ಹಾಗೂ ನಂತರ ವ್ಯಾಸಂಗ ಮಾಡಿರುವ ನಿರುದ್ಯೋಗಿ ವಿಕಲಚೇತನರಿಗೆ ಮಾಸಿಕ ರೂ. 1,000/-ಗಳ ನಿರುದ್ಯೋಗ ಭತ್ಯೆಯನ್ನು ಮಂಜೂರು ಮಾಡಲಾಗುತ್ತಿದೆ.

## ಪುನರ್ವಸತಿ ಯೋಜನೆಗಳು:

**1. ಸಾಧನ ಸಲಕರಣೆಗಳು :**

ಈ ಯೋಜನೆಯಡಿಯಲ್ಲಿ ವಿಕಲಚೇತನರಿಗೆ ಅವಶ್ಯವಾಗಿರುವ ಸಾಧನ ಸಲಕರಣೆಗಳನ್ನು (ಕ್ಯಾಲಿಪರ್ಸ್, ಬ್ರೈಲ್ ವಾಚ್, ವಾಕಿಂಗ್ ಸ್ಟಿಕ್, ಕ್ರಚಸ್, ಊರುಗೋಲು, ಶ್ರವಣಸಾಧನ ಇನ್ನು ಮುಂತಾದವುಗಳು) ರೂ.15,000/-ಗಳ ಮಿತಿಯೊಳಗೆ ಉಚಿತವಾಗಿ ನೀಡಲಾಗುತ್ತದೆ. ಫಲಾನುಭವಿಯ ಕುಟುಂಬದ ವಾರ್ಷಿಕ ಆದಾಯ ಮಿತಿಯನ್ನು ಗ್ರಾಮೀಣ ಪ್ರದೇಶದ ಫಲಾನುಭವಿಗಳಿಗೆ ರೂ.11,500/- ಮತ್ತು ನಗರ ಪ್ರದೇಶದ ಫಲಾನುಭವಿಗಳಿಗೆ ರೂ.24,000/- ನಿಗದಿಗೊಳಿಸಲಾಗಿದೆ. ಫಲಾನುಭವಿಗಳು ಅರ್ಜಿಯನ್ನು ಆಯಾ ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ಅರ್ಜಿಯನ್ನು ಸಲ್ಲಿಸಿ, ಯೋಜನೆಯ ಸೌಲಭ್ಯವನ್ನು ಪಡೆಯಬಹುದಾಗಿರುತ್ತದೆ.

**2. ಅಂಧ ವಿದ್ಯಾರ್ಥಿಗಳಿಗೆ ಟಾಕಿಂಗ್ ಲ್ಯಾಪ್‌ಟಾಪ್ ಯೋಜನೆ :**

ಎಸ್.ಎಸ್.ಎಲ್.ಸಿ ನಂತರ ವ್ಯಾಸಂಗ ಮಾಡುವ ದೃಷ್ಟಿದೋಷವುಳ್ಳ ವಿಕಲಚೇತನ ವಿದ್ಯಾರ್ಥಿಗಳು ಇತ್ತೀಚಿನ ತಂತ್ರಜ್ಞಾನ ಮತ್ತು ತಂತ್ರಾಂಶದ ಉಪಯೋಗದಿಂದ ಉನ್ನತ ಶಿಕ್ಷಣವನ್ನು ಪಡೆಯಲು ಅನುಕೂಲವಾಗುವಂತೆ ಮಾತನಾಡುವ (ಟಾಕಿಂಗ್) ಲ್ಯಾಪ್‌ಟಾಪ್‌ಗಳನ್ನು ಅರ್ಹ ಫಲಾನುಭವಿಗಳಿಗೆ ನೀಡಲಾಗುತ್ತಿದೆ.

**3.ತೀವ್ರತೆರೆನಾದ ದೈಹಿಕ ವಿಕಲಚೇತನರಿಗೆ ಯಂತ್ರಚಾಲಿತ ದ್ವಿಚಕ್ರವಾಹನ ಯೋಜನೆ :**

20 ರಿಂದ 60 ವರ್ಷದ ವಯೋಮಾನದ ತೀವ್ರತರವಾದ ದೈಹಿಕ ವಿಕಲಚೇತನರ ಕುಟುಂಬದ ವಾರ್ಷಿಕ ವರಮಾನ ರೂ.2.00 ಲಕ್ಷಗಳಿಗಿಂತ ಕಡಿಮೆ ಇರುವ ವಿಕಲಚೇತನರಿಗೆ ಅನುಕೂಲವಾಗುವಂತೆ ಜೀವಿತ ಕಾಲದಲ್ಲಿ ಒಂದು ಬಾರಿ ಯಂತ್ರಚಾಲಿತ ದ್ವಿಚಕ್ರ ವಾಹನವನ್ನು ಒದಗಿಸಲಾಗುತ್ತಿದೆ.

**4. ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರ ಯೋಜನೆ :**

ವಿಕಲಚೇತನರನ್ನು ಗುರುತಿಸಿ ಅವರಿಗೆ ಶೈಕ್ಷಣಿಕ, ಉದ್ಯೋಗ ಮತ್ತು ತರಬೇತಿ, ಸಾಮಾಜಿಕ ಭದ್ರತೆ ಹಾಗೂ ಪುನರ್ವಸತಿ ಸೇವೆಗಳನ್ನು ಅವರ ಮನೆ ಬಾಗಿಲಿನಲ್ಲಿಯೇ ಒದಗಿಸಿ ಅವರ ಸರ್ವಾಂಗೀಣ ಪುನರ್ವಸತಿಯನ್ನು ಕಲ್ಪಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ. ಈ ಯೋಜನೆಯಡಿ ವಿಕಲಚೇತನರಿಗೆ ಅಗತ್ಯವಿರುವ ವೈದ್ಯಕೀಯ ಸೇವೆ, ವೃತ್ತಿ ಚಿಕಿತ್ಸೆ, ವಿವಿಧ ರೀತಿಯ ಸಾಧನ ಸಲಕರಣೆಗಳನ್ನು ಕೇಂದ್ರಗಳಲ್ಲಿ ತಯಾರಿಸಿ ಒದಗಿಸಲಾಗುವುದು.

**5. ಅಂಗವಿಕಲತೆಯನ್ನು ನಿವಾರಿಸುವ ಶಸ್ತ್ರ ಚಿಕಿತ್ಸೆಗಾಗಿ ವೈದ್ಯಕೀಯ ಪರಿಹಾರ ನಿಧಿ ಯೋಜನೆ:-**

ಅಂಗವಿಕಲ ವ್ಯಕ್ತಿಗಳಿಗೆ ಅಂಗವಿಕಲತೆಯನ್ನು ನಿವಾರಿಸಲು **ಶಸ್ತ್ರ** ಚಿಕಿತ್ಸೆಗಾಗಿ ಸರ್ಕಾರಿ ಆಸ್ಪತ್ರೆ ಸಂಜಯಗಾಂಧಿ ಆಸ್ಪತ್ರೆಗಳಲ್ಲಿ ಹಾಗೂ ಸುಸಜ್ಜಿತ ಖಾಸಗಿ ಆಸ್ಪತ್ರೆಗಳಲ್ಲಿ ಅಂಗವಿಕಲತೆ ನಿವಾರಣಾ **ಶಸ್ತ್ರ** ಚಿಕಿತ್ಸೆಗಾಗಿ ರೂ.1.00 ಲಕ್ಷಗಳವರೆಗೆ ಸಹಾಯ ಧನವನ್ನು ಮಂಜೂರು ಮಾಡಲಾಗುತ್ತಿದೆ.

**6. ಅಂಧ ವಿದ್ಯಾರ್ಥಿಗಳಿಗೆ ಬ್ರೈಲ್ ಕಿಟ್‌ಗಳು:**

2022-23ನೇ ಸಾಲಿನಲ್ಲಿ ಅಂಧ ವಿದ್ಯಾರ್ಥಿಗಳಿಗೆ ಟಾಕಿಂಗ್ ಮೊಬೈಲ್, ಬ್ರೈಲ್ ವಾಚ್ ಒಳಗೊಂಡಂತೆ ಬ್ರೈಲ್ ಕಿಟ್‌ಗಳನ್ನು ಖರೀದಿಸಿ ವಿತರಿಸಲಾಗುತ್ತಿದೆ.

**7. ಶ್ರವಣದೋಷವುಳ್ಳ ವ್ಯಕ್ತಿಗಳ ಸ್ವಯಂ ಉದ್ಯೋಗಕ್ಕಾಗಿ ಹೊಲಿಗೆ ಯಂತ್ರಗಳು:**

ಶ್ರವಣದೋಷವುಳ್ಳ ವ್ಯಕ್ತಿಗಳ ಸ್ವಯಂ ಉದ್ಯೋಗಕ್ಕಾಗಿ ಹೊಲಿಗೆ ಯಂತ್ರಗಳನ್ನು ಖರೀದಿಸಿ ವಿತರಿಸಲಾಗಿದೆ.

8. **ಸಾಧನೆ ಮತ್ತು ಪ್ರತಿಭೆ ಯೋಜನೆ :**

ವಿಕಲಚೇತನರು ನೀಡುವ ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಿ ಧನಸಹಾಯ ನೀಡುವ ಸಲುವಾಗಿ "ಪ್ರತಿಭೆ" ಎಂಬ ಯೋಜನೆಯನ್ನು ಹಾಗೂ ಅಂಗವಿಕಲ ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡಿ ಧನಸಹಾಯ ನೀಡಲು "ಸಾಧನೆ" ಎಂಬ ಯೋಜನೆಯು ಜಾರಿಯಲ್ಲಿದ್ದು, ಕ್ರೀಡೆಗಳಲ್ಲಿ ವಿಶೇಷ ಸಾಧನೆಗೈದ ವಿಕಲಚೇತನರಿಗೆ ರೂ.50,000/-ಗಳ ಧನ ಸಹಾಯವನ್ನು ನೀಡಲಾಗುತ್ತಿದೆ.

**9. ನಿರಾಮಯ ಆರೋಗ್ಯ ವಿಮಾ ಯೋಜನೆ :**

ಬುದ್ಧಿಮಾಂದ್ಯ, ಸೆರಬ್ರಲ್ ಪಾಲ್ಸಿ, ಆಟಿಸಂ ಮತ್ತು ಬಹುವಿಧ ಅಂಗವಿಕಲತೆಗೆ ಒಳಗಾದ ಬಡತನ ರೇಖೆಗಿಂತ ಕೆಳಗಿರುವ ಕುಟುಂಬದ ವಿಕಲಚೇತನರಿಗೆ ನಿರಾಮಯ ಎಂಬ ಆರೋಗ್ಯ ವಿಮಾ ಯೋಜನೆಯು ಜಾರಿಯಲ್ಲಿದ್ದು, ಮೇಲೆ ವಿವರಿಸಿದ ಅಂಗವಿಕಲತೆ ಹೊಂದಿರುವ ಪ್ರತಿ ವ್ಯಕ್ತಿಗೆ ವರ್ಷಕ್ಕೆ ಒಂದು ಸಾರಿಗೆ ಪ್ರೀಮಿಯಂ ಮೊತ್ತ ರೂ.250/-ಗಳನ್ನು ಅಧಿಕೃತ ಸಂಸ್ಥೆಗೆ ಪಾವತಿಸಲಾಗುವುದು. ಪ್ರತಿ ವರ್ಷ ಯೋಜನೆಯಡಿ ಬರುವ ಫಲಾನುಭವಿಗಳು ರೂ.1.00 ಲಕ್ಷಗಳವರೆಗೆ ವೈದ್ಯಕೀಯ ಸೌಲಭ್ಯ ಪಡೆಯಬಹುದಾಗಿರುತ್ತದೆ.

**10. ಸ್ಪರ್ಧಾ ಚೇತನ :**

ಈ ಯೋಜನೆಯಡಿ ವಿಶೇಷ ಸಾಮರ್ಥ್ಯ/ಭಿನ್ನ ಸಾಮರ್ಥ್ಯದ ವಿದ್ಯಾವಂತ ವ್ಯಕ್ತಿಗಳಿಗೆ ಐ.ಎ.ಎಸ್./ಕೆ.ಎ.ಎಸ್. ಹಾಗೂ ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸರ್ಕಾರದ ಇತರೆ ಇಲಾಖೆಗಳಡಿ ಗುರುತಿಸಲ್ಪಟ್ಟ ಪೂರ್ವ ಪರೀಕ್ಷಾ ತರಬೇತಿ ಕೇಂದ್ರಗಳು ಹಾಗೂ ಈ ಇಲಾಖೆಯಿಂದ ಗುರುತಿಸಲ್ಪಟ್ಟ ತರಬೇತಿ ಕೇಂದ್ರಗಳ ಮೂಲಕ ತರಬೇತಿಯನ್ನು ಉಚಿತವಾಗಿ ನೀಡಲಾಗುತ್ತಿದೆ.

**11. ವಿಕಲಚೇತನರಿಗೆ ಗುರುತಿನ ಚೀಟಿ ನೀಡುವ ಯೋಜನೆ :**

ಈ ಯೋಜನೆಯಡಿಯಲ್ಲಿ ವಿಕಲಚೇತನ ವ್ಯಕ್ತಿಗಳಿಗೆ ಗುರುತಿನ ಚೀಟಿಗಳನ್ನು ನೀಡಲಾಗುತ್ತಿದೆ. ಈ ಗುರುತಿನ ಚೀಟಿಯನ್ನು ವಿವಿಧ ಸರ್ಕಾರಿ ಸೌಲಭ್ಯಗಳನ್ನು ಪಡೆಯಲು ಉಪಯೋಗಿಸಿಕೊಳ್ಳಬಹುದಾಗಿದೆ. ಭಾರತ ಸರ್ಕಾರದ ವಿಕಲಚೇತನರಿಗೆ ವಿಶಿಷ್ಟ ಗುರುತಿನ ಚೀಟಿ (Unique Disablity Card) ಯೋಜನೆಯನ್ನು ಪ್ರಾರಂಭಿಸಲು ರಾಜ್ಯಾದ್ಯಂತ ವೈದ್ಯಕೀಯ ಮಂಡಳಿಯನ್ನು/ ಪ್ರಾಧಿಕಾರವನ್ನು ಗುರುತಿಸಲಾಗುತ್ತಿದೆ. ಈ ಯೋಜನೆಯಡಿ ರಾಜ್ಯಾದ್ಯಂತ ಒಂದೇ ರೀತಿಯ ಗುರುತಿನ ಚೀಟಿಯನ್ನು ಪಡೆಯಬಹುದಾಗಿದೆ.

# ಅನುಬಂಧ-3

## ಉದ್ಯೋಗಸ್ಥ ವಿಕಲಚೇತನ ಮಹಿಳೆಯರಿಗೆ ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ವಸತಿ ನಿಲಯಗಳಿಗೆ ಕಳೆದ ಮೂರು ವರ್ಷಗಳಲ್ಲಿ ಸೌಲಭ್ಯ ಪಡೆದಿರುವವರ ಫಲಾನುಭವಿಗಳ ಸಂಖ್ಯೆಗಳ ಪಟ್ಟಿ

| ಕ್ರ ಸಂ | ಜಿಲ್ಲೆಯ ಹೆಸರು | 2020-21 | 2021-22 | 2022-23 |
|---|---|---|---|---|
| 1 | ಬೆಂಗಳೂರು (ನ) | 127 | 113 | 175 |
| 2 | ಬೆಂಗಳೂರು (ಗ್ರಾ) | 50 | 40 | 51 |
| 3 | ಬೆಳಗಾವಿ | 25 | 25 | 25 |
| 4 | ಬಳ್ಳಾರಿ | 25 | 22 | 22 |
| 5 | ಬೀದರ್ | 37 | 22 | 37 |
| 6 | ವಿಜಯಪುರ | 7 | 36 | 50 |
| 7 | ಬಾಗಲಕೋಟೆ | 10 | 28 | 31 |
| 8 | ಚಿತ್ರದುರ್ಗ | 33 | 15 | 22 |
| 9 | ಚಿಕ್ಕಮಗಳೂರು | 0 | 0 | 00 |
| 10 | ಚಾಮರಾಜನಗರ | 40 | 21 | 30 |
| 11 | ಧಾರವಾಡ | 26 | 35 | 35 |
| 12 | ದಕ್ಷಿಣ ಕನ್ನಡ | 0 | 0 | 00 |
| 13 | ದಾವಣಗೆರೆ | 0 | 0 | 00 |
| 14 | ಕಲಬುರಗಿ | 50 | 30 | 30 |
| 15 | ಗದಗ | 31 | 28 | 44 |
| 16 | ಹಾಸನ | 50 | 38 | 32 |
| 17 | ಹಾವೇರಿ | 50 | 40 | 35 |
| 18 | ಕೊಡಗು | 0 | 0 | 00 |
| 19 | ಕೋಲಾರ | 28 | 41 | 50 |
| 20 | ಕೊಪ್ಪಳ | 35 | 0 | 40 |
| 21 | ಮೈಸೂರು | 50 | 47 | 35 |
| 22 | ಮಂಡ್ಯ | 17 | 5 | 20 |
| 23 | ರಾಯಚೂರು | 0 | 0 | 00 |
| 24 | ಶಿವಮೊಗ್ಗ | 50 | 40 | 46 |
| 25 | ತುಮಕೂರು | 25 | 35 | 30 |
| 26 | ಉತ್ತರ ಕನ್ನಡ | 0 | 0 | 00 |
| 27 | ಉಡುಪಿ | 0 | 0 | 00 |
| 28 | ರಾಮನಗರ | 0 | 0 | 00 |
| 29 | ಚಿಕ್ಕಬಳ್ಳಾಪುರ | 41 | 43 | 44 |
| 30 | ಯಾದಗಿರಿ | 25 | 31 | 41 |
| ಒಟ್ಟು | | 832 | 735 | 925 |

ಅನುಬಂಧ-3(1)

# ವಿವಾಹ ಪ್ರೋತ್ಸಾಹಧನ ಯೋಜನೆಯಡಿ ಕಳೆದ ಮೂರು ವರ್ಷಗಳ ಫಲಾನುಭವಿಗಳ ಜಿಲ್ಲಾವಾರು ಸಂಖ್ಯೆಗಳ ಪಟ್ಟಿ

| ಕ್ರ.ಸಂ | ಜಿಲ್ಲೆಯ ಹೆಸರು | 2020-21 | 2021-22 | 2022-23 |
|---|---|---|---|---|
| 1 | ಬೆಂಗಳೂರು (ನ) | 14 | 19 | 09 |
| 2 | ಬೆಂಗಳೂರು (ಗ್ರಾ) | 12 | 13 | 06 |
| 3 | ಬೆಳಗಾವಿ | 12 | 14 | 13 |
| 4 | ಬಳ್ಳಾರಿ | 13 | 22 | 19 |
| 5 | ಬೀದರ್ | 20 | 27 | 11 |
| 6 | ವಿಜಯಪುರ | 64 | 30 | 13 |
| 7 | ಬಾಗಲಕೋಟೆ | 60 | 25 | 16 |
| 8 | ಚಿತ್ರದುರ್ಗ | 24 | 12 | 05 |
| 9 | ಚಿಕ್ಕಮಗಳೂರು | 12 | 17 | 08 |
| 10 | ಚಾಮರಾಜನಗರ | 17 | 19 | 03 |
| 11 | ಧಾರವಾಡ | 27 | 36 | 07 |
| 12 | ದಕ್ಷಿಣ ಕನ್ನಡ | 29 | 35 | 05 |
| 13 | ದಾವಣಗೆರೆ | 25 | 41 | 12 |
| 14 | ಕಲಬುರಗಿ | 87 | 44 | 69 |
| 15 | ಗದಗ | 9 | 17 | 15 |
| 16 | ಹಾಸನ | 18 | 35 | 07 |
| 17 | ಹಾವೇರಿ | 13 | 39 | 07 |
| 18 | ಕೊಡಗು | 7 | 5 | 06 |
| 19 | ಕೋಲಾರ | 10 | 16 | 09 |
| 20 | ಕೊಪ್ಪಳ | 21 | 34 | 19 |
| 21 | ಮೈಸೂರು | 9 | 15 | 19 |
| 22 | ಮಂಡ್ಯ | 14 | 14 | 17 |
| 23 | ರಾಯಚೂರು | 23 | 58 | 21 |
| 24 | ಶಿವಮೊಗ್ಗ | 52 | 24 | 24 |
| 25 | ತುಮಕೂರು | 24 | 32 | 13 |
| 26 | ಉತ್ತರ ಕನ್ನಡ | 25 | 41 | 22 |
| 27 | ಉಡುಪಿ | 19 | 36 | 09 |
| 28 | ರಾಮನಗರ | 13 | 8 | 15 |
| 29 | ಚಿಕ್ಕಬಳ್ಳಾಪುರ | 14 | 7 | 07 |
| 30 | ಯಾದಗಿರಿ | 22 | 32 | 08 |
| | ಒಟ್ಟು | **709** | **767** | **414** |

## ಅನುಬಂಧ-3(2)

## ಶಿಶುಪಾಲನಾ ಭತ್ಯೆ ಯೋಜನೆಯಡಿ ಕಳೆದ ಮೂರು ವರ್ಷಗಳ ಫಲಾನುಭವಿಗಳ ಜಿಲ್ಲಾವಾರು ಸಂಖ್ಯೆಗಳ ಪಟ್ಟಿ

| ಕ್ರ ಸಂ | ಜಿಲ್ಲೆಯ ಹೆಸರು | 2020-21 | 2021-22 | 2022-23 |
|---|---|---|---|---|
| 1 | ಬೆಂಗಳೂರು (ನ) | 9 | 13 | 13 |
| 2 | ಬೆಂಗಳೂರು (ಗ್ರಾ) | 2 | 3 | 06 |
| 3 | ಬೆಳಗಾವಿ | 3 | 3 | 03 |
| 4 | ಬಳ್ಳಾರಿ | 1 | 1 | 01 |
| 5 | ಬೀದರ್ | 1 | 1 | 01 |
| 6 | ವಿಜಯಪುರ | 1 | 1 | 01 |
| 7 | ಬಾಗಲಕೋಟೆ | 2 | 3 | 06 |
| 8 | ಚಿತ್ರದುರ್ಗ | 2 | 4 | 07 |
| 9 | ಚಿಕ್ಕಮಗಳೂರು | 0 | 0 | 00 |
| 10 | ಚಾಮರಾಜನಗರ | 8 | 3 | 06 |
| 11 | ಧಾರವಾಡ | 1 | 1 | 02 |
| 12 | ದಕ್ಷಿಣ ಕನ್ನಡ | 1 | 3 | 02 |
| 13 | ದಾವಣಗೆರೆ | 2 | 4 | 03 |
| 14 | ಕಲಬುರಗಿ | 0 | 2 | 03 |
| 15 | ಗದಗ | 3 | 4 | 02 |
| 16 | ಹಾಸನ | 7 | 9 | 11 |
| 17 | ಹಾವೇರಿ | 7 | 9 | 10 |
| 18 | ಕೊಡಗು | 0 | 1 | 01 |
| 19 | ಕೋಲಾರ | 3 | 3 | 07 |
| 20 | ಕೊಪ್ಪಳ | 2 | 2 | 02 |
| 21 | ಮೈಸೂರು | 11 | 7 | 10 |
| 22 | ಮಂಡ್ಯ | 12 | 13 | 12 |
| 23 | ರಾಯಚೂರು | 1 | 2 | 02 |
| 24 | ಶಿವಮೊಗ್ಗ | 9 | 6 | 05 |
| 25 | ತುಮಕೂರು | 4 | 7 | 12 |
| 26 | ಉತ್ತರ ಕನ್ನಡ | 3 | 4 | 04 |
| 27 | ಉಡುಪಿ | 1 | 3 | 03 |
| 28 | ರಾಮನಗರ | 2 | 5 | 06 |
| 29 | ಚಿಕ್ಕಬಳ್ಳಾಪುರ | 8 | 6 | 04 |
| 30 | ಯಾದಗಿರಿ | 0 | 0 | 00 |
| | ಒಟ್ಟು | **106** | **123** | **145** |

## ಅನುಬಂಧ-3(3)
## ನಿರುದ್ಯೋಗ ಭತ್ಯೆ ಯೋಜನೆಯಡಿ
## ಕಳೆದ ಮೂರು ವರ್ಷಗಳ ಫಲಾನುಭವಿಗಳ ಜಿಲ್ಲಾವಾರು ಸಂಖ್ಯೆಗಳ ಪಟ್ಟಿ

| ಕ್ರ.ಸಂ | ಜಿಲ್ಲೆಯ ಹೆಸರು | 2020-21 | 2021-22 | 2022-23 |
|---|---|---|---|---|
| 1 | ಬೆಂಗಳೂರು (ನ) | 0 | 0 | 0 |
| 2 | ಬೆಂಗಳೂರು (ಗ್ರಾ) | 0 | 0 | 0 |
| 3 | ಬೆಳಗಾವಿ | 2 | 0 | 0 |
| 4 | ಬಳ್ಳಾರಿ | 0 | 0 | 0 |
| 5 | ಬೀದರ್ | 0 | 0 | 0 |
| 6 | ವಿಜಯಪುರ | 0 | 0 | 0 |
| 7 | ಬಾಗಲಕೋಟೆ | 3 | 0 | 0 |
| 8 | ಚಿತ್ರದುರ್ಗ | 0 | 0 | 0 |
| 9 | ಚಿಕ್ಕಮಗಳೂರು | 0 | 0 | 0 |
| 10 | ಚಾಮರಾಜನಗರ | 0 | 0 | 0 |
| 11 | ಧಾರವಾಡ | 0 | 0 | 0 |
| 12 | ದಕ್ಷಿಣ ಕನ್ನಡ | 5 | 5 | 5 |
| 13 | ದಾವಣಗೆರೆ | 0 | 1 | 1 |
| 14 | ಕಲಬುರಗಿ | 0 | 0 | 0 |
| 15 | ಗದಗ | 0 | 0 | 0 |
| 16 | ಹಾಸನ | 1 | 1 | 0 |
| 17 | ಹಾವೇರಿ | 0 | 1 | 1 |
| 18 | ಕೊಡಗು | 0 | 0 | 0 |
| 19 | ಕೋಲಾರ | 0 | 0 | 0 |
| 20 | ಕೊಪ್ಪಳ | 0 | 0 | 0 |
| 21 | ಮೈಸೂರು | 0 | 0 | 0 |
| 22 | ಮಂಡ್ಯ | 0 | 0 | 0 |
| 23 | ರಾಯಚೂರು | 0 | 0 | 0 |
| 24 | ಶಿವಮೊಗ್ಗ | 2 | 1 | 1 |
| 25 | ತುಮಕೂರು | 0 | 2 | 4 |
| 26 | ಉತ್ತರ ಕನ್ನಡ | 7 | 8 | 0 |
| 27 | ಉಡುಪಿ | 0 | 0 | 0 |
| 28 | ರಾಮನಗರ | 0 | 0 | 0 |
| 29 | ಚಿಕ್ಕಬಳ್ಳಾಪುರ | 0 | 0 | 0 |
| 30 | ಯಾದಗಿರಿ | 0 | 0 | 0 |
| | ಒಟ್ಟು | 15 | 19 | 12 |

ಅನುಬಂಧ-3(4)

## ಸ್ವಯಂ ಉದ್ಯೋಗಕ್ಕಾಗಿ ಆಧಾರ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ಸೌಲಭ್ಯ ಪಡೆದಿರುವ ಫಲಾನುಭವಿಗಳ ಜಿಲ್ಲಾವಾರು ಸಂಖ್ಯೆಗಳ ಪಟ್ಟಿ

| ಕ್ರ. ಸಂ | ಜಿಲ್ಲೆಯ ಹೆಸರು | 2020-21 | 2021-22 | 2022-23 |
|---|---|---|---|---|
| | | ಭೌತಿಕ | ಭೌತಿಕ | ಭೌತಿಕ |
| 1 | ಬೆಂಗಳೂರು (ನ) | 60 | 35 | 14 |
| 2 | ಬೆಂಗಳೂರು (ಗ್ರಾ) | 3 | 9 | 19 |
| 3 | ಬೆಳಗಾವಿ | 49 | 32 | 39 |
| 4 | ಬಳ್ಳಾರಿ | 3 | 8 | 16 |
| 5 | ಬೀದರ್ | 7 | 17 | 17 |
| 6 | ವಿಜಯಪುರ | 4 | 4 | 09 |
| 7 | ಬಾಗಲಕೋಟೆ | 0 | 43 | 23 |
| 8 | ಚಿತ್ರದುರ್ಗ | 8 | 11 | 10 |
| 9 | ಚಿಕ್ಕಮಗಳೂರು | 16 | 8 | 13 |
| 10 | ಚಾಮರಾಜನಗರ | 0 | 0 | 00 |
| 11 | ಧಾರವಾಡ | 20 | 10 | 07 |
| 12 | ದಕ್ಷಿಣ ಕನ್ನಡ | 7 | 16 | 25 |
| 13 | ದಾವಣಗೆರೆ | 7 | 18 | 10 |
| 14 | ಕಲಬುರಗಿ | 0 | 9 | 20 |
| 15 | ಗದಗ | 5 | 8 | 06 |
| 16 | ಹಾಸನ | 6 | 7 | 11 |
| 17 | ಹಾವೇರಿ | 8 | 15 | 14 |
| 18 | ಕೊಡಗು | 2 | 9 | 10 |
| 19 | ಕೋಲಾರ | 5 | 16 | 09 |
| 20 | ಕೊಪ್ಪಳ | 7 | 9 | 02 |
| 21 | ಮೈಸೂರು | 11 | 13 | 14 |
| 22 | ಮಂಡ್ಯ | 8 | 9 | 11 |
| 23 | ರಾಯಚೂರು | 4 | 12 | 09 |
| 24 | ಶಿವಮೊಗ್ಗ | 7 | 11 | 05 |
| 25 | ತುಮಕೂರು | 14 | 0 | 00 |
| 26 | ಉತ್ತರ ಕನ್ನಡ | 5 | 6 | 09 |
| 27 | ಉಡುಪಿ | 3 | 13 | 09 |
| 28 | ರಾಮನಗರ | 3 | 4 | 07 |
| 29 | ಚಿಕ್ಕಬಳ್ಳಾಪುರ | 5 | 10 | 09 |
| 30 | ಯಾದಗಿರಿ | 16 | 0 | 09 |
| | ಒಟ್ಟು | 293 | 362 | 356 |

ಅನುಬಂಧ-3(5)

# ಗ್ರಾಮೀಣ ಪುನರ್ವಸತಿ ಕಾರ್ಯಕರ್ತರ ಮರಣ ಪರಿಹಾರಧನ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ಸೌಲಭ್ಯ ಪಡೆದಿರುವವರ ಪಟ್ಟಿ

| ಕ್ರ. ಸಂ | ಜಿಲ್ಲೆಯ ಹೆಸರು | 2020-21 | 2021-22 | 2022-23 |
|---|---|---|---|---|
| 1 | ಬೆಂಗಳೂರು (ನ) | 0 | 0 | 0 |
| 2 | ಬೆಂಗಳೂರು (ಗ್ರಾ) | 0 | 0 | 0 |
| 3 | ಬೆಳಗಾವಿ | 0 | 0 | 0 |
| 4 | ಬಳ್ಳಾರಿ | 0 | 0 | 0 |
| 5 | ಬೀದರ್ | 2 | 2 | 2 |
| 6 | ವಿಜಯಪುರ | 2 | 4 | 4 |
| 7 | ಬಾಗಲಕೋಟೆ | 0 | 2 | 2 |
| 8 | ಚಿತ್ರದುರ್ಗ | 2 | 2 | 2 |
| 9 | ಚಿಕ್ಕಮಗಳೂರು | 0 | 1 | 1 |
| 10 | ಚಾಮರಾಜನಗರ | 2 | 1 | 1 |
| 11 | ಧಾರವಾಡ | 0 | 0 | 0 |
| 12 | ದಕ್ಷಿಣ ಕನ್ನಡ | 0 | 2 | 2 |
| 13 | ದಾವಣಗೆರೆ | 0 | 0 | 0 |
| 14 | ಕಲಬುರಗಿ | 0 | 1 | 1 |
| 15 | ಗದಗ | 0 | 0 | 0 |
| 16 | ಹಾಸನ | 0 | 0 | 0 |
| 17 | ಹಾವೇರಿ | 0 | 0 | 0 |
| 18 | ಕೊಡಗು | 0 | 0 | 0 |
| 19 | ಕೋಲಾರ | 0 | 1 | 1 |
| 20 | ಕೊಪ್ಪಳ | 0 | 1 | 1 |
| 21 | ಮೈಸೂರು | 0 | 1 | 1 |
| 22 | ಮಂಡ್ಯ | 0 | 1 | 1 |
| 23 | ರಾಯಚೂರು | 0 | 1 | 1 |
| 24 | ಶಿವಮೊಗ್ಗ | 2 | 3 | 3 |
| 25 | ತುಮಕೂರು | 0 | 0 | 0 |
| 26 | ಉತ್ತರ ಕನ್ನಡ | 2 | 0 | 0 |
| 27 | ಉಡುಪಿ | 0 | 0 | 0 |
| 28 | ರಾಮನಗರ | 0 | 0 | 0 |
| 29 | ಚಿಕ್ಕಬಳ್ಳಾಪುರ | 0 | 2 | 2 |
| 30 | ಯಾದಗಿರಿ | 0 | 0 | 0 |
| | ಒಟ್ಟು | 12 | 25 | 25 |

## ಅನುಬಂಧ-3(6)

## ಸಾಧನ ಸಲಕರಣೆ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ಸೌಲಭ್ಯ ಪಡೆದಿರುವ ಫಲಾನುಭವಿಗಳ ಜಿಲ್ಲಾವಾರು ಪಟ್ಟಿ

| ಕ್ರ. ಸಂ | ಜಿಲ್ಲೆಯ ಹೆಸರು | 2020-21 | 2021-22 | 2022-23 |
|---|---|---|---|---|
| 1 | ಬೆಂಗಳೂರು (ನ) | 200 | 104 | 160 |
| 2 | ಬೆಂಗಳೂರು (ಗ್ರಾ) | 86 | 190 | 152 |
| 3 | ಬೆಳಗಾವಿ | 226 | 154 | 352 |
| 4 | ಬಳ್ಳಾರಿ | 118 | 124 | 64 |
| 5 | ಬೀದರ್ | 84 | 88 | 67 |
| 6 | ವಿಜಯಪುರ | 103 | 141 | 115 |
| 7 | ಬಾಗಲಕೋಟೆ | 323 | 332 | 206 |
| 8 | ಚಿತ್ರದುರ್ಗ | 285 | 164 | 32 |
| 9 | ಚಿಕ್ಕಮಗಳೂರು | 230 | 305 | 532 |
| 10 | ಚಾಮರಾಜನಗರ | 0 | 50 | 0 |
| 11 | ಧಾರವಾಡ | 78 | 72 | 138 |
| 12 | ದಕ್ಷಿಣ ಕನ್ನಡ | 317 | 160 | 276 |
| 13 | ದಾವಣಗೆರೆ | 319 | 272 | 370 |
| 14 | ಕಲಬುರಗಿ | 0 | 279 | 0 |
| 15 | ಗದಗ | 107 | 124 | 200 |
| 16 | ಹಾಸನ | 146 | 151 | 396 |
| 17 | ಹಾವೇರಿ | 521 | 610 | 196 |
| 18 | ಕೊಡಗು | 134 | 86 | 56 |
| 19 | ಕೋಲಾರ | 252 | 196 | 306 |
| 20 | ಕೊಪ್ಪಳ | 153 | 104 | 10 |
| 21 | ಮೈಸೂರು | 237 | 201 | 212 |
| 22 | ಮಂಡ್ಯ | 132 | 12 | 130 |
| 23 | ರಾಯಚೂರು | 397 | 475 | 475 |
| 24 | ಶಿವಮೊಗ್ಗ | 603 | 265 | 130 |
| 25 | ತುಮಕೂರು | 196 | 99 | 283 |
| 26 | ಉತ್ತರ ಕನ್ನಡ | 58 | 136 | 174 |
| 27 | ಉಡುಪಿ | 38 | 65 | 59 |
| 28 | ರಾಮನಗರ | 123 | 123 | 185 |
| 29 | ಚಿಕ್ಕಬಳ್ಳಾಪುರ | 112 | 376 | 200 |
| 30 | ಯಾದಗಿರಿ | 107 | 145 | 42 |
| | ಒಟ್ಟು | 5685 | 5603 | 5518 |

ಅನುಬಂಧ-3(7)

## ಅಂಧ ವಿದ್ಯಾರ್ಥಿಗಳಿಗೆ ಟಾಕಿಂಗ್ ಲ್ಯಾಪ್‌ಟಾಪ್ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ಸೌಲಭ್ಯ ಪಡೆದಿರುವ ಫಲಾನುಭವಿಗಳ ಜಿಲ್ಲಾವಾರು ಸಂಖ್ಯೆಗಳ ಪಟ್ಟಿ

| ಕ್ರ. ಸಂ | ಜಿಲ್ಲೆಯ ಹೆಸರು | 2020-21 | 2021-22 | 2022-23 |
|---|---|---|---|---|
| | | ಭೌತಿಕ | ಭೌತಿಕ | ಭೌತಿಕ |
| 1 | ಬೆಂಗಳೂರು (ನ) | 40 | 55 | 36 |
| 2 | ಬೆಂಗಳೂರು (ಗ್ರಾ) | 6 | 7 | 07 |
| 3 | ಬೆಳಗಾವಿ | 26 | 30 | 16 |
| 4 | ಬಳ್ಳಾರಿ | 11 | 16 | 03 |
| 5 | ಬೀದರ್ | 11 | 16 | 10 |
| 6 | ವಿಜಯಪುರ | 9 | 15 | 08 |
| 7 | ಬಾಗಲಕೋಟೆ | 11 | 10 | 12 |
| 8 | ಚಿತ್ರದುರ್ಗ | 9 | 12 | 05 |
| 9 | ಚಿಕ್ಕಮಗಳೂರು | 7 | 10 | 09 |
| 10 | ಚಾಮರಾಜನಗರ | 6 | 6 | 10 |
| 11 | ಧಾರವಾಡ | 11 | 15 | 12 |
| 12 | ದಕ್ಷಿಣ ಕನ್ನಡ | 13 | 10 | 09 |
| 13 | ದಾವಣಗೆರೆ | 9 | 25 | 10 |
| 14 | ಕಲಬುರಗಿ | 10 | 30 | 12 |
| 15 | ಗದಗ | 9 | 13 | 12 |
| 16 | ಹಾಸನ | 9 | 16 | 06 |
| 17 | ಹಾವೇರಿ | 13 | 13 | 15 |
| 18 | ಕೊಡಗು | 5 | 5 | 05 |
| 19 | ಕೋಲಾರ | 8 | 15 | 07 |
| 20 | ಕೊಪ್ಪಳ | 7 | 10 | 38 |
| 21 | ಮೈಸೂರು | 11 | 25 | 05 |
| 22 | ಮಂಡ್ಯ | 9 | 10 | 07 |
| 23 | ರಾಯಚೂರು | 8 | 15 | 09 |
| 24 | ಶಿವಮೊಗ್ಗ | 11 | 12 | 14 |
| 25 | ತುಮಕೂರು | 10 | 20 | 10 |
| 26 | ಉತ್ತರ ಕನ್ನಡ | 7 | 5 | 10 |
| 27 | ಉಡುಪಿ | 5 | 5 | 05 |
| 28 | ರಾಮನಗರ | 11 | 25 | 20 |
| 29 | ಚಿಕ್ಕಬಳ್ಳಾಪುರ | 9 | 13 | 05 |
| 30 | ಯಾದಗಿರಿ | 6 | 11 | 06 |
| | ಒಟ್ಟು | 317 | 470 | 333 |

ಅನುಬಂಧ-3(8)

**ತೀವ್ರತರನಾದ ವಿಕಲಚೇತನರಿಗೆ ಯಂತ್ರಚಾಲಿತ ದ್ವಿಚಕ್ರವಾಹನ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ಸೌಲಭ್ಯ ಪಡೆದಿರುವ ಫಲಾನುಭವಿಗಳ ಜಿಲ್ಲಾವಾರು ಸಂಖ್ಯೆಗಳ ಪಟ್ಟಿ**

| ಕ್ರ. ಸಂ | ಜಿಲ್ಲೆಯ ಹೆಸರು | 2020-21 | 2021-22 | **2022-23** |
|---|---|---|---|---|
| 1 | ಬೆಂಗಳೂರು (ನ) | 139 | 118 | 118 |
| 2 | ಬೆಂಗಳೂರು (ಗ್ರಾ) | 38 | 26 | 16 |
| 3 | ಬೆಳಗಾವಿ | 88 | 146 | 77 |
| 4 | ಬಳ್ಳಾರಿ | 50 | 64 | 41 |
| 5 | ಬೀದರ್ | 50 | 56 | 24 |
| 6 | ವಿಜಯಪುರ | 43 | 57 | 45 |
| 7 | ಬಾಗಲಕೋಟೆ | 67 | 67 | 34 |
| 8 | ಚಿತ್ರದುರ್ಗ | 45 | 46 | 24 |
| 9 | ಚಿಕ್ಕಮಗಳೂರು | 22 | 29 | 21 |
| 10 | ಚಾಮರಾಜನಗರ | 22 | 22 | 16 |
| 11 | ಧಾರವಾಡ | 64 | 59 | 33 |
| 12 | ದಕ್ಷಿಣ ಕನ್ನಡ | 58 | 32 | 40 |
| 13 | ದಾವಣಗೆರೆ | 37 | 49 | 28 |
| 14 | ಕಲಬುರಗಿ | 54 | 68 | 36 |
| 15 | ಗದಗ | 45 | 40 | 20 |
| 16 | ಹಾಸನ | 44 | 40 | 29 |
| 17 | ಹಾವೇರಿ | 74 | 62 | 56 |
| 18 | ಕೊಡಗು | 20 | 9 | 08 |
| 19 | ಕೋಲಾರ | 32 | 39 | 24 |
| 20 | ಕೊಪ್ಪಳ | 44 | 52 | 88 |
| 21 | ಮೈಸೂರು | 45 | 55 | 44 |
| 22 | ಮಂಡ್ಯ | 51 | 50 | 28 |
| 23 | ರಾಯಚೂರು | 40 | 45 | 38 |
| 24 | ಶಿವಮೊಗ್ಗ | 84 | 41 | 28 |
| 25 | ತುಮಕೂರು | 50 | 82 | 50 |
| 26 | ಉತ್ತರ ಕನ್ನಡ | 40 | 35 | 24 |
| 27 | ಉಡುಪಿ | 20 | 19 | 24 |
| 28 | ರಾಮನಗರ | 37 | 27 | 16 |
| 29 | ಚಿಕ್ಕಬಳ್ಳಾಪುರ | 35 | 37 | 20 |
| 30 | ಯಾದಗಿರಿ | 29 | 28 | 23 |
| | ಒಟ್ಟು | 1467 | 1500 | 1073 |

## ವೈದ್ಯಕೀಯ ಪರಿಹಾರ ನಿಧಿ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ಸೌಲಭ್ಯ ಪಡೆದಿರುವ ಫಲಾನುಭವಿಗಳ ಜಿಲ್ಲಾವಾರು ಸಂಖ್ಯೆಗಳ ಪಟ್ಟಿ:-

| ಕ್ರ. ಸಂ | ಜಿಲ್ಲೆಯ ಹೆಸರು | 2020-21 | 2021-22 | 2022-23 |
|---|---|---|---|---|
| 1 | ಬೆಂಗಳೂರು (ನ) | 0 | 2 | 0 |
| 2 | ಬೆಂಗಳೂರು (ಗ್ರಾ) | 2 | 4 | 3 |
| 3 | ಬೆಳಗಾವಿ | 0 | 0 | 0 |
| 4 | ಬಳ್ಳಾರಿ | 0 | 0 | 0 |
| 5 | ಬೀದರ್ | 0 | 0 | 0 |
| 6 | ವಿಜಯಪುರ | 1 | 3 | 6 |
| 7 | ಬಾಗಲಕೋಟೆ | 0 | 14 | 3 |
| 8 | ಚಿತ್ರದುರ್ಗ | 0 | 3 | 0 |
| 9 | ಚಿಕ್ಕಮಗಳೂರು | 0 | 0 | 1 |
| 10 | ಚಾಮರಾಜನಗರ | 0 | 0 | 0 |
| 11 | ಧಾರವಾಡ | 0 | 1 | 0 |
| 12 | ದಕ್ಷಿಣ ಕನ್ನಡ | 1 | 0 | 0 |
| 13 | ದಾವಣಗೆರೆ | 0 | 2 | 0 |
| 14 | ಕಲಬುರಗಿ | 2 | 4 | 2 |
| 15 | ಗದಗ | 0 | 0 | 0 |
| 16 | ಹಾಸನ | 4 | 1 | 2 |
| 17 | ಹಾವೇರಿ | 4 | 0 | 0 |
| 18 | ಕೊಡಗು | 0 | 0 | 0 |
| 19 | ಕೋಲಾರ | 0 | 0 | 0 |
| 20 | ಕೊಪ್ಪಳ | 0 | 0 | 0 |
| 21 | ಮೈಸೂರು | 0 | 2 | 2 |
| 22 | ಮಂಡ್ಯ | 1 | 0 | 1 |
| 23 | ರಾಯಚೂರು | 0 | 0 | 3 |
| 24 | ಶಿವಮೊಗ್ಗ | 3 | 2 | 0 |
| 25 | ತುಮಕೂರು | 0 | 0 | 0 |
| 26 | ಉತ್ತರ ಕನ್ನಡ | 4 | 3 | 2 |
| 27 | ಉಡುಪಿ | 0 | 1 | 3 |
| 28 | ರಾಮನಗರ | 2 | 0 | 4 |
| 29 | ಚಿಕ್ಕಬಳ್ಳಾಪುರ | 0 | 0 | 0 |
| 30 | ಯಾದಗಿರಿ | 1 | 5 | 0 |
| | ಒಟ್ಟು | 25 | 47 | 32 |

ಅನುಬಂಧ-3(10)

## ಅಂಧ ವಿದ್ಯಾರ್ಥಿಗಳಿಗೆ ಬ್ರೈಲ್‌ಕಿಟ್ ನೀಡುವ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ಸೌಲಭ್ಯ ಪಡೆದಿರುವ ಫಲಾನುಭವಿಗಳ ವಿವರ

| ಕ್ರ. ಸಂ | ಜಿಲ್ಲೆಯ ಹೆಸರು | 2020-21 | 2021-22 | 2022-23 |
|---|---|---|---|---|
| 1 | ಬೆಂಗಳೂರು (ನ) | 56 | 88 | 30 |
| 2 | ಬೆಂಗಳೂರು (ಗ್ರಾ) | 10 | 10 | 10 |
| 3 | ಬೆಳಗಾವಿ | 41 | 6 | 16 |
| 4 | ಬಳ್ಳಾರಿ | 17 | 10 | 3 |
| 5 | ಬೀದರ್ | 17 | 0 | 12 |
| 6 | ವಿಜಯಪುರ | 15 | 9 | 14 |
| 7 | ಬಾಗಲಕೋಟೆ | 19 | 18 | 19 |
| 8 | ಚಿತ್ರದುರ್ಗ | 16 | 4 | 0 |
| 9 | ಚಿಕ್ಕಮಗಳೂರು | 10 | 13 | 15 |
| 10 | ಚಾಮರಾಜನಗರ | 11 | 1 | 10 |
| 11 | ಧಾರವಾಡ | 14 | 13 | 24 |
| 12 | ದಕ್ಷಿಣ ಕನ್ನಡ | 17 | 13 | 17 |
| 13 | ದಾವಣಗೆರೆ | 15 | 14 | 32 |
| 14 | ಕಲಬುರಗಿ | 25 | 2 | 40 |
| 15 | ಗದಗ | 11 | 4 | 18 |
| 16 | ಹಾಸನ | 13 | 12 | 13 |
| 17 | ಹಾವೇರಿ | 18 | 17 | 23 |
| 18 | ಕೊಡಗು | 7 | 1 | 0 |
| 19 | ಕೋಲಾರ | 12 | 11 | 17 |
| 20 | ಕೊಪ್ಪಳ | 12 | 28 | 44 |
| 21 | ಮೈಸೂರು | 25 | 19 | 30 |
| 22 | ಮಂಡ್ಯ | 17 | 7 | 10 |
| 23 | ರಾಯಚೂರು | 12 | 17 | 16 |
| 24 | ಶಿವಮೊಗ್ಗ | 16 | 17 | 24 |
| 25 | ತುಮಕೂರು | 17 | 22 | 14 |
| 26 | ಉತ್ತರ ಕನ್ನಡ | 11 | 11 | 15 |
| 27 | ಉಡುಪಿ | 9 | 7 | 7 |
| 28 | ರಾಮನಗರ | 13 | 11 | 25 |
| 29 | ಚಿಕ್ಕಬಳ್ಳಾಪುರ | 13 | 2 | 0 |
| 30 | ಯಾದಗಿರಿ | 11 | 13 | 1 |
| | ಒಟ್ಟು | 500 | 400 | 499 |

ಅನುಬಂಧ-3(11)

## ಶ್ರವಣದೋಷವುಳ್ಳ ವ್ಯಕ್ತಿಗಳಿಗೆ ಹೊಲಿಗೆ ಯಂತ್ರ ನೀಡುವ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ಸೌಲಭ್ಯ ಪಡೆದಿರುವ ಫಲಾನುಭವಿಗಳ ಪಟ್ಟಿ ವಿವರ

| ಕ್ರ. ಸಂ | ಜಿಲ್ಲೆಯ ಹೆಸರು | 2020-21 | 2021-22 | 2022-23 |
|---|---|---|---|---|
| 1 | ಬೆಂಗಳೂರು (ನ) | 40 | 14 | 2 |
| 2 | ಬೆಂಗಳೂರು (ಗ್ರಾ) | 6 | 15 | 8 |
| 3 | ಬೆಳಗಾವಿ | 25 | 6 | 3 |
| 4 | ಬಳ್ಳಾರಿ | 15 | 21 | 15 |
| 5 | ಬೀದರ್ | 14 | 20 | 12 |
| 6 | ವಿಜಯಪುರ | 14 | 24 | 13 |
| 7 | ಬಾಗಲಕೋಟೆ | 14 | 22 | 20 |
| 8 | ಚಿತ್ರದುರ್ಗ | 12 | 24 | 0 |
| 9 | ಚಿಕ್ಕಮಗಳೂರು | 8 | 18 | 13 |
| 10 | ಚಾಮರಾಜನಗರ | 10 | 16 | 2 |
| 11 | ಧಾರವಾಡ | 12 | 25 | 13 |
| 12 | ದಕ್ಷಿಣ ಕನ್ನಡ | 10 | 12 | 4 |
| 13 | ದಾವಣಗೆರೆ | 15 | 18 | 18 |
| 14 | ಕಲಬುರಗಿ | 26 | 32 | 0 |
| 15 | ಗದಗ | 8 | 14 | 11 |
| 16 | ಹಾಸನ | 12 | 16 | 6 |
| 17 | ಹಾವೇರಿ | 10 | 21 | 14 |
| 18 | ಕೊಡಗು | 5 | 0 | 3 |
| 19 | ಕೋಲಾರ | 12 | 10 | 7 |
| 20 | ಕೊಪ್ಪಳ | 12 | 56 | 21 |
| 21 | ಮೈಸೂರು | 25 | 27 | 0 |
| 22 | ಮಂಡ್ಯ | 12 | 15 | 10 |
| 23 | ರಾಯಚೂರು | 15 | 27 | 11 |
| 24 | ಶಿವಮೊಗ್ಗ | 10 | 4 | 7 |
| 25 | ತುಮಕೂರು | 18 | 35 | 0 |
| 26 | ಉತ್ತರ ಕನ್ನಡ | 8 | 19 | 0 |
| 27 | ಉಡುಪಿ | 6 | 10 | 7 |
| 28 | ರಾಮನಗರ | 8 | 10 | 8 |
| 29 | ಚಿಕ್ಕಬಳ್ಳಾಪುರ | 9 | 12 | 8 |
| 30 | ಯಾದಗಿರಿ | 9 | 12 | 14 |
| | ಒಟ್ಟು | 400 | 555 | 250 |

ಅನುಬಂಧ–3(12)

## ಸಾಧನೆ ಮತ್ತು ಪ್ರತಿಭೆ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ಸೌಲಭ್ಯ ಪಡೆದಿರುವ ಫಲಾನುಭವಿಗಳ ಜಿಲ್ಲಾವಾರು ಮಾಹಿತಿ:-

| ಕ್ರ. ಸಂ | ಜಿಲ್ಲೆಯ ಹೆಸರು | 2020-21 | 2021-22 | 2022-23 |
|---|---|---|---|---|
| 1 | ಬೆಂಗಳೂರು (ನ) | 50 | 39 | 41 |
| 2 | ಬೆಂಗಳೂರು (ಗ್ರಾ) | 0 | 0 | 01 |
| 3 | ಬೆಳಗಾವಿ | 2 | 0 | 00 |
| 4 | ಬಳ್ಳಾರಿ | 0 | 0 | 14 |
| 5 | ಬೀದರ್ | 0 | 0 | 00 |
| 6 | ವಿಜಯಪುರ | 2 | 14 | 01 |
| 7 | ಬಾಗಲಕೋಟೆ | 3 | 1 | 15 |
| 8 | ಚಿತ್ರದುರ್ಗ | 0 | 3 | 01 |
| 9 | ಚಿಕ್ಕಮಗಳೂರು | 0 | 0 | 00 |
| 10 | ಚಾಮರಾಜನಗರ | 0 | 3 | 00 |
| 11 | ಧಾರವಾಡ | 4 | 6 | 12 |
| 12 | ದಕ್ಷಿಣ ಕನ್ನಡ | 0 | 0 | 02 |
| 13 | ದಾವಣಗೆರೆ | 0 | 0 | 08 |
| 14 | ಕಲಬುರಗಿ | 0 | 0 | 00 |
| 15 | ಗದಗ | 0 | 0 | 00 |
| 16 | ಹಾಸನ | 0 | 4 | 07 |
| 17 | ಹಾವೇರಿ | 0 | 0 | 00 |
| 18 | ಕೊಡಗು | 1 | 2 | 02 |
| 19 | ಕೋಲಾರ | 1 | 0 | 00 |
| 20 | ಕೊಪ್ಪಳ | 0 | 0 | 00 |
| 21 | ಮೈಸೂರು | 0 | 6 | 06 |
| 22 | ಮಂಡ್ಯ | 0 | 10 | 09 |
| 23 | ರಾಯಚೂರು | 0 | 0 | 01 |
| 24 | ಶಿವಮೊಗ್ಗ | 0 | 1 | 00 |
| 25 | ತುಮಕೂರು | 0 | 0 | 00 |
| 26 | ಉತ್ತರ ಕನ್ನಡ | 0 | 0 | 00 |
| 27 | ಉಡುಪಿ | 0 | 0 | 00 |
| 28 | ರಾಮನಗರ | 1 | 0 | 01 |
| 29 | ಚಿಕ್ಕಬಳ್ಳಾಪುರ | 0 | 0 | 01 |
| 30 | ಯಾದಗಿರಿ | 0 | 0 | 0 |
| | ಒಟ್ಟು | 64 | 89 | 122 |

# ಅನುಬಂಧ – 4

**ವಿಕಲಚೇತನರಿಗಾಗಿ ಇಲಾಖೆಯಿಂದ ಉಚಿತವಾಗಿ ನೀಡಲಾಗುತ್ತಿರುವ ಯೋಜನೆಗಳು / ಸೇವಾ ಸೌಲಭ್ಯಗಳು**

**1. ಅಂಗವಿಕಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹನ ಧನ:**

ಈ ಯೋಜನೆಯಡಿ ಒಂದನೇ ತರಗತಿಯಿಂದ ಸ್ನಾತಕೋತ್ತರ ಪದವಿಯವರೆಗೆ ವ್ಯಾಸಂಗ ಮಾಡುತ್ತಿರುವ ಅರ್ಹ ವಿಕಲಚೇತನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ಆಯಾ ಜಿಲ್ಲಾ ಕಛೇರಿಗಳ ಮೂಲಕ ಮಂಜೂರು ಮಾಡಲಾಗುತ್ತಿದೆ. 2001-02ನೇ ಸಾಲಿನಿಂದ ಈ ಯೋಜನೆಯ ಫಲಾನುಭವಿಗಳಿಗೆ ಆದಾಯ ಮಿತಿಯಿಂದ ವಿನಾಯಿತಿಗೊಳಿಸಲಾಗಿದೆ.

2. **ಪ್ರತಿಭಾವಂತ ಅಂಗವಿಕಲ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ಯೋಜನೆ:**

ಸಾರ್ವತ್ರಿಕ ಪರೀಕ್ಷೆಗಳಲ್ಲಿ ಶೇಕಡ 60 ಕ್ಕಿಂತಲೂ ಹೆಚ್ಚಿನ ಅಂಕಗಳನ್ನು ಪಡೆದ ಪ್ರತಿಭಾನ್ವಿತ ವಿಕಲಚೇತನ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡುವ ಯೋಜನೆ ಇದಾಗಿದೆ. ಈ ಯೋಜನೆಯನ್ನು 2001-02ನೇ ಸಾಲಿನಿಂದ ಬಿ.ಎಡ್, ಎಂ.ಎಡ್. ಮತ್ತು ಟಿ.ಸಿ.ಹೆಚ್. ವಿದ್ಯಾರ್ಥಿಗಳಿಗೂ ವಿಸ್ತರಿಸಲಾಗಿದೆ.

**3. ಉನ್ನತ ಶಿಕ್ಷಣ ಪಡೆಯುವ ವಿಕಲಚೇತನರಿಗೆ ಶುಲ್ಕ ಮರುಪಾವತಿ:**

ಉನ್ನತ ಶಿಕ್ಷಣ ಪಡೆಯುವ ವಿಕಲಚೇತನರಿಗೆ ಎಸ್.ಎಸ್.ಎಲ್.ಸಿ ನಂತರ ಉನ್ನತ ಶಿಕ್ಷಣ, ವೃತ್ತಿ ಶಿಕ್ಷಣ, ತಾಂತ್ರಿಕ ಶಿಕ್ಷಣ, ಸ್ನಾತಕೋತ್ತರ, ಔದ್ಯೋಗಿಕ ಶಿಕ್ಷಣಗಳಿಗೆ ನಿಯಮಾನುಸಾರ ಆಯ್ಕೆಯಾಗುವ ವಿದ್ಯಾರ್ಥಿಗಳಿಗೆ ಸರ್ಕಾರವು ನಿಗದಿಪಡಿಸಿರುವ ಪರೀಕ್ಷಾ ಶುಲ್ಕ ಬೋಧನಾ ಶುಲ್ಕ, ಪ್ರಯೋಗಾಲಯ ಶುಲ್ಕ, ಕ್ರೀಡಾ ಶುಲ್ಕ ಹಾಗೂ ಗ್ರಂಥಾಲಯ ಶುಲ್ಕಗಳನ್ನು ಮರುಪಾವತಿಸುವ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಸೌಲಭ್ಯ ಪಡೆಯುವ ವಿದ್ಯಾರ್ಥಿಗಳಿಗೆ ಯಾವುದೇ ಆದಾಯಮಿತಿ ಇರುವುದಿಲ್ಲ. ವೈದ್ಯಕೀಯ ಮಂಡಳಿಯವರು ಶಿಫಾರಸ್ಸು ಮಾಡಿರುವ ವಿಕಲಚೇತನ ಅಭ್ಯರ್ಥಿಗಳು ಮಾತ್ರ ಈ ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ.

**4. ಬ್ರೈಲ್ ಮುದ್ರಣಾಲಯ:**

ದೃಷ್ಟಿದೋಷವುಳ್ಳ ಮಕ್ಕಳಿಗೆ ಬೇಕಾಗುವ ಬ್ರೈಲ್ ಪುಸ್ತಕಗಳನ್ನು ಮುದ್ರಿಸಿ ಸಂಬಂಧಪಟ್ಟ ಅಂಧರ ಶಾಲೆಗಳಿಗೆ ಮೈಸೂರಿನಲ್ಲಿರುವ ಬ್ರೈಲ್ ಮುದ್ರಣಾಲಯದ ಮೂಲಕ ಉಚಿತವಾಗಿ ಸರಬರಾಜು ಮಾಡಲಾಗುತ್ತಿದೆ.

**5. ವಿಶೇಷ ಶಿಕ್ಷಣ ತರಬೇತಿ ಕೇಂದ್ರ ಯೋಜನೆ:**

ದೃಷ್ಟಿದೋಷವುಳ್ಳ ಹಾಗೂ ಶ್ರವಣದೋಷವುಳ್ಳ ವಿದ್ಯಾರ್ಥಿಗಳಿಗೆ ಬೋಧಿಸುವ ಶಿಕ್ಷಕರಿಗೆ ವಿಶೇಷ ಶಿಕ್ಷಣ ನೀಡಲು ತಲಾ ಒಂದರಂತೆ ವಿಶೇಷ ಶಿಕ್ಷಕರ ತರಬೇತಿ ಕೇಂದ್ರವನ್ನು ಮೈಸೂರಿನಲ್ಲಿ ನಡೆಸುತ್ತಿದೆ.

**6. ಮಾನಸಿಕ ಅಸ್ವಸ್ಥ, ಸೆರಬ್ರಲ್ ಪಾಲ್ಸಿ, ಆಟಿಸಂ ಮಕ್ಕಳ ಹಗಲು ಯೋಗಕ್ಷೇಮ ಕೇಂದ್ರಗಳು:**

ಸೆರಬ್ರಲ್ ಪಾಲ್ಸಿ, ಆಟಿಸಂ, ಮಾನಸಿಕ ಅಸ್ವಸ್ಥ ಹಾಗೂ ತೀವ್ರತರನಾದ ಅಂಗವೈಕಲ್ಯತೆ ಹೊಂದಿರುವ ಮೂರ ರಿಂದ 25 ವರ್ಷದ ಒಳಗಿನ ಮಕ್ಕಳಿಗಾಗಿ 02 ಹಗಲು ಯೋಗಕ್ಷೇಮ ಕೇಂದ್ರಗಳನ್ನು ಬೆಂಗಳೂರು ನಗರ ಜಿಲ್ಲೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸುತ್ತಿದ್ದು, ಪ್ರತಿ ಕೇಂದ್ರದಲ್ಲಿ 25 ಮಕ್ಕಳನ್ನು ದಾಖಲಿಸಲು ಅವಕಾಶವಿದ್ದು, ಪ್ರತಿ ಮಗುವಿಗೆ ಮಾಸಿಕ ರೂ. 15,000/-ಗಳಂತೆ ವಾರ್ಷಿಕ 37.50 ಲಕ್ಷಗಳನ್ನು ಮಂಜೂರು ಮಾಡಲಾಗುತ್ತಿದೆ.

## ಉದ್ಯೋಗ ಮತ್ತು ತರಬೇತಿ:

### 1. ಅಂಗವಿಕಲ ಪುರುಷ ಹಾಗೂ ಮಹಿಳೆಯರ ವಸತಿನಿಲಯ:

ಬೆಂಗಳೂರಿನಲ್ಲಿ ಮಹಿಳಾ ಮತ್ತು ಪುರುಷ ಅಂಗವಿಕಲ ನೌಕರರು ಮತ್ತು ಪ್ರಶಿಕ್ಷಣಾರ್ಥಿಗಳಿಗೆ ಪ್ರತ್ಯೇಕವಾದ ಒಂದೊಂದು ವಸತಿ ನಿಲಯವನ್ನು ನಡೆಸಲಾಗುತ್ತಿದೆ. ಪುರುಷರ ವಸತಿ ನಿಲಯದಲ್ಲಿ 50 ನಿವಾಸಿಗಳು ಹಾಗೂ ಮಹಿಳೆಯರ ವಸತಿ ನಿಲಯದಲ್ಲಿ 50 ನಿವಾಸಿಗಳನ್ನು ದಾಖಲಿಸಲು ಅವಕಾಶವಿದೆ.

### 2. ಉದ್ಯೋಗಸ್ಥ ವಿಕಲಚೇತನ ಮಹಿಳೆಯರಿಗೆ ವಸತಿ ನಿಲಯಗಳು:

ಅಂಗವಿಕಲ ಉದ್ಯೋಗಸ್ಥ ಮಹಿಳೆಯರಿಗಾಗಿ ಹಾಗೂ ವಿದ್ಯಾರ್ಥಿನಿ/ತರಬೇತಾರ್ಥಿಗಳಿಗೆ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಜಿಲ್ಲಾ ಕೇಂದ್ರಗಳಲ್ಲಿ 26 ಮಹಿಳಾ ವಸತಿ ನಿಲಯಗಳನ್ನು ನಡೆಸುತ್ತಿದ್ದು, ಸದರಿ ವಸತಿ ನಿಲಯದಲ್ಲಿ ಉದ್ಯೋಗಸ್ಥ ವಿಕಲಚೇತನ ಮಹಿಳೆಯರಿಗೆ ಹಾಗೂ ವಿದ್ಯಾರ್ಥಿನಿಯರಿಗೆ ವಸತಿ ಸೌಲಭ್ಯವನ್ನು ಕಲ್ಪಿಸಲಾಗಿದೆ. ಈ ವಸತಿ ನಿಲಯದಲ್ಲಿ ವಿದ್ಯಾರ್ಥಿನಿಯರು ಹಾಗೂ ತರಬೇತಿದಾರರಿಗೆ ಉಚಿತ ಊಟದ ವ್ಯವಸ್ಥೆಯಿದ್ದು, ಉದ್ಯೋಗಸ್ಥ ಮಹಿಳೆಯರು ಮಾಸಿಕ 600/-ಗಳನ್ನು ಪಾವತಿಸಬೇಕಾಗಿರುತ್ತದೆ.

### 3. ಗ್ರಾಮೀಣ ಪುನರ್ವಸತಿ ಯೋಜನೆ:

ಪ್ರತಿ ಗ್ರಾಮ ಪಂಚಾಯತಿ ಅಡಿಯಲ್ಲಿ ಎಸ್.ಎಸ್.ಎಲ್.ಸಿ. ಉತ್ತೀರ್ಣ/ ಅನುತ್ತೀರ್ಣರಾದ ಸಮರ್ಥ ವಿಕಲಚೇತನರನ್ನು ಗ್ರಾಮೀಣ ಪುನರ್ವಸತಿ ಕಾರ್ಯಕರ್ತರೆಂದು ಹಾಗೂ ತಾಲ್ಲೂಕು ಪಂಚಾಯಿತಿ ಕಚೇರಿಯಲ್ಲಿ ಸ್ಥಳೀಯ ಸಮರ್ಥ ಪದವೀಧರ ವಿಕಲಚೇತನರೊಬ್ಬರನ್ನು ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರೆಂದು, ಸ್ಥಳೀಯ ನಗರ ಪ್ರದೇಶಗಳಲ್ಲಿ ನಗರ ಪುನರ್ವಸತಿ ಕಾರ್ಯಕರ್ತರೆಂದು ಮತ್ತು ನಿರ್ದೇಶನಾಲಯದಲ್ಲಿ ರಾಜ್ಯ ಸಂಯೋಜಕರನ್ನು ಗೌರವಧನ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅವಕಾಶವಿದೆ. ಈ ಕಾರ್ಯಕರ್ತರ ಮೂಲಕ ವಿಕಲಚೇತನರಿಗೆ ಎಲ್ಲಾ ಸೇವಾ ಸೌಲಭ್ಯಗಳನ್ನು ಅವರಿರುವ ಸ್ಥಳಗಳಲ್ಲಿಯೇ ವಿಕಲಚೇತನರ ಮೂಲಕವೇ ತಲುಪಿಸಲಾಗುವುದು.
ಜಿಲ್ಲಾ ಸಂಯೋಜಕರಿಗೆ ನೀಡಲಾಗುತ್ತಿದ್ದ ಗೌರವಧನ ರೂ.13,000/-ಗಳಿಂದ ರೂ.19,000/-ಗಳಿಗೆ ಹಾಗೂ ರಾಜ್ಯ ಸಂಯೋಜಕರಿಗೆ ನೀಡಲಾಗುತ್ತಿದ್ದ ಗೌರವಧನ ರೂ.26,000/-ಗಳಿಂದ ರೂ.38,000/-ಗಳಿಗೆ ಹೆಚ್ಚಿಸಲಾಗಿದೆ.

### 4. ಮರಣ ಪರಿಹಾರ ನಿಧಿ ಯೋಜನೆ:

ಈ ಯೋಜನೆಯಡಿ ಕಾರ್ಯಕರ್ತರು ನಿಧನಹೊಂದಿದ್ದಲ್ಲಿ ರೂ.50,000/-ಗಳ ಪರಿಹಾರ ಧನ ನೀಡಲಾಗುತ್ತಿದೆ. 2023-24ನೇ ಸಾಲಿನಲ್ಲಿ ರೂ.50,000/-ಗಳಿಂದ ರೂ.1,00,000/-ಗಳಿಗೆ ಹೆಚ್ಚಿಸಿ ಆದೇಶಿಸಲಾಗಿರುತ್ತದೆ.

### 5. ಆಧಾರ ಯೋಜನೆ :

ವಿಕಲಚೇತನರು ಸ್ವಯಂ ಉದ್ಯೋಗ ಕೈಗೊಂಡು ಜೀವನ ಸಾಗಿಸಲು ಅನುಕೂಲವಾಗುವಂತೆ ಆಧಾರ ಸಾಲ ಯೋಜನೆಯನ್ನು ಅನುಷ್ಠಾನಗೊಳಿಸ ಲಾಗುತ್ತಿದೆ. ಈ ಯೋಜನೆಯಡಿ ಶೇ.50ರಷ್ಟು ಬ್ಯಾಂಕ್ ಸಾಲ ಮತ್ತು ಶೇ.50ರಷ್ಟು ಸಹಾಯಧನವನ್ನು ಇಲಾಖೆಯಿಂದ ನೀಡಲಾಗುತ್ತದೆ.

## ಆರ್ಥಿಕ ಮತ್ತು ಸಾಮಾಜಿಕ ಭದ್ರತಾ ಯೋಜನೆಗಳು:

### 1. ಸಮಾಜ ಸೇವಾ ಸಂಕೀರ್ಣ:

ನಿರ್ಗತಿಕ ಬುದ್ಧಿಮಾಂದ್ಯ ಪುರುಷರಿಗಾಗಿ ಸಮಾಜ ಸೇವಾ ಸಂಕೀರ್ಣ ಸಂಸ್ಥೆಯು ಬೆಂಗಳೂರಿನಲ್ಲಿ ಸರ್ಕಾರದ ವತಿಯಿಂದ ನಡೆಯುತ್ತಿದ್ದು, ಈ ಸಂಸ್ಥೆಯಲ್ಲಿ ಉಚಿತ ಊಟ, ವಸತಿ, ವೈದ್ಯಕೀಯ ಸೌಲಭ್ಯ, ಸಂರಕ್ಷಣೆ ಒದಗಿಸಲಾಗುತ್ತಿದೆ. ಸಮಾಜ ಸೇವಾ ಸಂಕೀರ್ಣ, ಮಂದಮತಿ ಮಹಿಳೆಯರ ಅನುಪಾಲನಾ ಗೃಹಗಳನ್ನು ಬೆಂಗಳೂರು ನಗರ ಹಾಗೂ ಹುಬ್ಬಳ್ಳಿ, ಹಾಗೂ ಮಾನಸ ಕೇಂದ್ರಗಳು, ಬೆಳಗಾವಿ ಮತ್ತು ಬೆಂಗಳೂರು ನಗರ ಜಿಲ್ಲೆ ಒಟ್ಟು 5 ಸಂಸ್ಥೆಗಳು ಸೇರಿದಂತೆ.

**2. ಮಂದಮತಿ ಮಹಿಳೆಯರ ಅನುಪಾಲನಾ ಗೃಹ:**

18 ವರ್ಷ ಮೇಲ್ಪಟ್ಟ ನಿರ್ಗತಿಕ ಮಹಿಳಾ ಬುದ್ಧಿಮಾಂದ್ಯರಿಗೆ ಉಚಿತ ಊಟ, ವಸತಿ, ವೈದ್ಯಕೀಯ ಸೌಲಭ್ಯ ಮತ್ತು ಸಂರಕ್ಷಣೆ ಒದಗಿಸುವ ಉದ್ದೇಶದಿಂದ ಮಂದಮತಿ ಮಹಿಳೆಯರ ಅನುಪಾಲನಾ ಗೃಹಗಳನ್ನು ಬೆಂಗಳೂರು ನಗರ ಹಾಗೂ ಹುಬ್ಬಳ್ಳಿಯಲ್ಲಿ ಇಲಾಖಾವತಿಯಿಂದ ನಡೆಸಲಾಗುತ್ತಿದೆ. 183 ಫಲಾನುಭವಿಗಳು ಸೌಲಭ್ಯವನ್ನು ಪಡೆದಿರುತ್ತಾರೆ.

**3. ಮಾನಸಿಕ ಅಸ್ವಸ್ಥರಿಗೆ ಮಾನಸ ಕೇಂದ್ರಗಳು:**

ಮಾನಸಿಕ ಅಸ್ವಸ್ಥರಿಗಾಗಿ ಬೆಂಗಳೂರು, ಬೆಳಗಾವಿ, ರಾಯಚೂರು, ಬಳ್ಳಾರಿ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಮಾನಸ ಕೇಂದ್ರಗಳನ್ನು ಪ್ರಾರಂಭಿಸಲು ಸರ್ಕಾರ ಮಂಜೂರಾತಿಯನ್ನು ನೀಡಿರುತ್ತದೆ. ರಾಜ್ಯ ಉಚ್ಚ ನ್ಯಾಯಾಲಯ ಮತ್ತು ಅಧೀನ ನ್ಯಾಯಾಲಯಗಳಿಂದ ಆದೇಶಿಸಲ್ಪಡುವ ಮಾನಸಿಕ ಅಸ್ವಸ್ಥರನ್ನು ಹಾಗೂ ರಸ್ತೆಗಳಲ್ಲಿ ಓಡಾಡುವ ನಿರ್ಗತಿಕ ಮಾನಸಿಕ ಅಸ್ವಸ್ಥರನ್ನು ಈ ಕೇಂದ್ರಗಳಲ್ಲಿ ನಿರ್ದಿಷ್ಟ ವೈದ್ಯಕೀಯ ಪ್ರಾಧಿಕಾರದ ಆದೇಶದ ಮೇರೆಗೆ ದಾಖಲಿಸಲು ಅವಕಾಶವಿರುತ್ತದೆ. ಈ ಕೇಂದ್ರಗಳಲ್ಲಿ ಫಲಾನುಭವಿಗಳಿಗೆ ಉಚಿತ ಊಟ, ವಸತಿ, ವೈದ್ಯಕೀಯ ಶುಶ್ರೂಷೆ, ವೈದ್ಯಕೀಯ ಸಲಹೆ(ಕೌನ್ಸಲಿಂಗ್) ಸೌಲಭ್ಯವನ್ನು ನೀಡಲಾಗುತ್ತಿದ್ದು, ಇವು ಅಲ್ಪಾವಧಿ ಕೇಂದ್ರಗಳಾಗಿರುತ್ತವೆ. ಪ್ರಸ್ತುತ ಬೆಂಗಳೂರು ನಗರ ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ಮಾತ್ರ ಮಾನಸ ಕೇಂದ್ರಗಳು ನಡೆಯುತ್ತಿವೆ.

**4. ಬುದ್ಧಿಮಾಂದ್ಯ ಮಕ್ಕಳ ಪೋಷಕರಿಗೆ ವಿಮಾ ಯೋಜನೆ:**

ಬುದ್ಧಿಮಾಂದ್ಯ ಮಕ್ಕಳ/ವ್ಯಕ್ತಿಗಳ ತಂದೆ: ತಾಯಿ: ಪೋಷಕರ ವಿಮಾ ಯೋಜನೆಯನ್ನು ಭಾರತೀಯ ಜೀವ ವಿಮಾ ನಿಗಮದ ಮೂಲಕ ಯೋಜನೆಯನ್ನು ಅನುಷ್ಠಾನಗೊಳಿಸ ಲಾಗುತ್ತಿದ್ದು, ಬುದ್ಧಿಮಾಂದ್ಯ ಮಕ್ಕಳ/ವ್ಯಕ್ತಿಗಳ ತಂದೆ:ತಾಯಿ: ಪೋಷಕರು ಮರಣ ಹೊಂದಿದ ನಂತರ ಬುದ್ಧಿಮಾಂದ್ಯ ಮಕ್ಕಳ ಜೀವನ ನಿರ್ವಹಣೆಗಾಗಿ ರೂ.20,000/-ಗಳ ಪರಿಹಾರ ಧನವನ್ನು ಬುದ್ಧಿಮಾಂದ್ಯ ವ್ಯಕ್ತಿಗಳ ನಾಮ ನಿರ್ದೇಶಿತರಿಗೆ ಪಾವತಿಸಲಾಗುತ್ತಿದೆ.

**5. ವಿಕಲಚೇತನ ವ್ಯಕ್ತಿಗಳನ್ನು ಸಾಮಾನ್ಯರು ಮದುವೆಯಾದಲ್ಲಿ ಪ್ರೋತ್ಸಾಹ ಧನ ನೀಡುವ ಯೋಜನೆ:**

ವಿಕಲಚೇತನ ಯುವಕ/ಯುವತಿಯರನ್ನು ವಿವಾಹವಾಗುವ ಸಾಮಾನ್ಯ ಯುವಕ/ಯುವತಿಯರಿಗೆ ನಿರಂತರವಾಗಿ ಮಾಸಿಕ ಆದಾಯ ದೊರಕಿಸಲು ವಿಕಲಚೇತನ ವ್ಯಕ್ತಿಯ ಹೆಸರಿನಲ್ಲಿ ರೂ.50,000/-ಗಳನ್ನು 05 ವರ್ಷದ ಅವಧಿಗೆ ಹೂಡಿಕೆಯ ರೂಪದಲ್ಲಿ ನೀಡಲಾಗುವುದು. ಅದರಿಂದ ಬರುವ ಬಡ್ಡಿ ಹಣವನ್ನು ಫಲಾನುಭವಿಗಳು ಉಪಯೋಗಿಸಬಹುದು ಹಾಗೂ 05 ವರ್ಷಗಳ ನಂತರ ಠೇವಣಿ ಮೊತ್ತವನ್ನು ವಾಪಸ್ಸು ಪಡೆಯಬಹುದು ಅಥವಾ ಮುಂದುವರೆಸಲು ಸಹ ಅವಕಾಶವಿರುತ್ತದೆ.

**6. ಅಂಧ ಮಹಿಳೆಯರಿಗೆ ಜನಿಸುವ ಮಕ್ಕಳಿಗೆ ಆರೈಕೆ ಭತ್ಯೆ ಒದಗಿಸುವ ಯೋಜನೆ :**

ಅಂಧ ಮಹಿಳೆಯರು ಮಗುವಿಗೆ ಜನ್ಮ ನೀಡಿದಾಗ ಆ ಮಗುವನ್ನು ಇತರೆ ಸಾಮಾನ್ಯ ತಾಯಂದಿರಂತೆ ಆರೈಕೆ ಮಾಡುವುದು ಕಷ್ಟಕರವಾಗಿರುತ್ತದೆ. ಇಂತಹ ಅಂಧ ಮಹಿಳೆಯರಿಗೆ ಜನಿಸುವ ಮಕ್ಕಳಿಗೆ ಆರೈಕೆ ಮಾಡಲು ಆಯಾ ಸೇವೆ, ಆರೋಗ್ಯ ಪಾಲನೆ, ಪೌಷ್ಠಿಕ ಆಹಾರ, ಔಷಧೋಪಚಾರಗಳಿಗೆ ಮಾಹೆಯಾನ ರೂ.2000/- ದಂತೆ 5 ವರ್ಷಗಳ ಅವಧಿಗೆ ಸಹಾಯಧನವನ್ನು ನೀಡಲಾಗುತ್ತಿದೆ. ಈ ಸೌಲಭ್ಯವನ್ನು ಕನಿಷ್ಠ 2 ಮಕ್ಕಳವರೆಗೆ ಪಡೆಯಬಹುದಾಗಿದೆ.

**7. ನಿರುದ್ಯೋಗ ಭತ್ಯೆ :**

ಎಸ್. ಎಸ್. ಎಲ್. ಸಿ. ಹಾಗೂ ನಂತರ ವ್ಯಾಸಂಗ ಮಾಡಿರುವ ನಿರುದ್ಯೋಗಿ ವಿಕಲಚೇತನರಿಗೆ ಮಾಸಿಕ ರೂ. ೧೦೦೦/-ಗಳ ನಿರುದ್ಯೋಗ ಭತ್ಯೆಯನ್ನು ಮಂಜೂರು ಮಾಡಲಾಗುತ್ತಿದೆ.

## ಪುನರ್ವಸತಿ ಯೋಜನೆಗಳು:

### 1. ಸಾಧನ ಸಲಕರಣೆಗಳು :

ಈ ಯೋಜನೆಯಡಿಯಲ್ಲಿ ವಿಕಲಚೇತನರಿಗೆ ಅವಶ್ಯವಾಗಿರುವ ಸಾಧನ ಸಲಕರಣೆಗಳನ್ನು (ಕ್ಯಾಲಿಪರ್ಸ್, ಬ್ರೈಲ್ ವಾಚ್, ವಾಕಿಂಗ್ ಸ್ಟಿಕ್, ಕ್ರುಚಸ್, ಊರುಗೋಲು, ಶ್ರವಣಸಾಧನ ಇನ್ನು ಮುಂತಾದವುಗಳು) ರೂ.15,000/-ಗಳ ಮಿತಿಯೊಳಗೆ ಉಚಿತವಾಗಿ ನೀಡಲಾಗುತ್ತದೆ. ಫಲಾನುಭವಿಯ ಕುಟುಂಬದ ವಾರ್ಷಿಕ ಆದಾಯ ಮಿತಿಯನ್ನು ಗ್ರಾಮೀಣ ಪ್ರದೇಶದ ಫಲಾನುಭವಿಗಳಿಗೆ ರೂ.11,500/- ಮತ್ತು ನಗರ ಪ್ರದೇಶದ ಫಲಾನುಭವಿಗಳಿಗೆ ರೂ.24,000/- ನಿಗದಿಗೊಳಿಸಲಾಗಿದೆ. ಫಲಾನುಭವಿಗಳು ಅರ್ಜಿಯನ್ನು ಆಯಾ ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ಅರ್ಜಿಯನ್ನು ಸಲ್ಲಿಸಿ, ಯೋಜನೆಯ ಸೌಲಭ್ಯವನ್ನು ಪಡೆಯಬಹುದಾಗಿರುತ್ತದೆ.

### 2. ಅಂಧ ವಿದ್ಯಾರ್ಥಿಗಳಿಗೆ ಟಾಕಿಂಗ್ ಲ್ಯಾಪ್‌ಟಾಪ್ ಯೋಜನೆ :

ಎಸ್.ಎಸ್.ಎಲ್.ಸಿ ನಂತರ ವ್ಯಾಸಂಗ ಮಾಡುವ ದೃಷ್ಟಿದೋಷವುಳ್ಳ ವಿಕಲಚೇತನ ವಿದ್ಯಾರ್ಥಿಗಳು ಇತ್ತೀಚಿನ ತಂತ್ರಜ್ಞಾನ ಮತ್ತು ತಂತ್ರಾಂಶದ ಉಪಯೋಗದಿಂದ ಉನ್ನತ ಶಿಕ್ಷಣವನ್ನು ಪಡೆಯಲು ಅನುಕೂಲವಾಗುವಂತೆ ಮಾತನಾಡುವ (ಟಾಕಿಂಗ್) ಲ್ಯಾಪ್‌ಟಾಪ್‌ಗಳನ್ನು ಅರ್ಹ ಫಲಾನುಭವಿಗಳಿಗೆ ನೀಡಲಾಗುತ್ತಿದೆ.

### 3.ತೀವ್ರತೆರೆನಾದ ದೈಹಿಕ ವಿಕಲಚೇತನರಿಗೆ ಯಂತ್ರಚಾಲಿತ ದ್ವಿಚಕ್ರವಾಹನ ಯೋಜನೆ :

20 ರಿಂದ 60 ವರ್ಷದ ವಯೋಮಾನದ ತೀವ್ರತರವಾದ ದೈಹಿಕ ವಿಕಲಚೇತನರ ಕುಟುಂಬದ ವಾರ್ಷಿಕ ವರಮಾನ ರೂ.2.00 ಲಕ್ಷಗಳಿಗಿಂತ ಕಡಿಮೆ ಇರುವ ವಿಕಲಚೇತನರಿಗೆ ಅನುಕೂಲವಾಗುವಂತೆ ಜೀವಿತ ಕಾಲದಲ್ಲಿ ಒಂದು ಬಾರಿ ಯಂತ್ರಚಾಲಿತ ದ್ವಿಚಕ್ರ ವಾಹನವನ್ನು ಒದಗಿಸಲಾಗುತ್ತಿದೆ.

### 4. ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರ ಯೋಜನೆ :

ವಿಕಲಚೇತನರನ್ನು ಗುರುತಿಸಿ ಅವರಿಗೆ ಶೈಕ್ಷಣಿಕ, ಉದ್ಯೋಗ ಮತ್ತು ತರಬೇತಿ, ಸಾಮಾಜಿಕ ಭದ್ರತೆ ಹಾಗೂ ಪುನರ್ವಸತಿ ಸೇವೆಗಳನ್ನು ಅವರ ಮನೆ ಬಾಗಿಲಿನಲ್ಲಿಯೇ ಒದಗಿಸಿ ಅವರ ಸರ್ವಾಂಗೀಣ ಪುನರ್ವಸತಿಯನ್ನು ಕಲ್ಪಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ. ಈ ಯೋಜನೆಯಡಿ ವಿಕಲಚೇತನರಿಗೆ ಅಗತ್ಯವಿರುವ ವೈದ್ಯಕೀಯ ಸೇವೆ, ವೃತ್ತಿ ಚಿಕಿತ್ಸೆ, ವಿವಿಧ ರೀತಿಯ ಸಾಧನ ಸಲಕರಣೆಗಳನ್ನು ಕೇಂದ್ರಗಳಲ್ಲಿ ತಯಾರಿಸಿ ಒದಗಿಸಲಾಗುವುದು.

### 5. ಅಂಗವಿಕಲತೆಯನ್ನು ನಿವಾರಿಸುವ ಶಸ್ತ್ರ ಚಿಕಿತ್ಸೆಗಾಗಿ ವೈದ್ಯಕೀಯ ಪರಿಹಾರ ನಿಧಿ ಯೋಜನೆ:-

ಅಂಗವಿಕಲ ವ್ಯಕ್ತಿಗಳಿಗೆ ಅಂಗವಿಕಲತೆಯನ್ನು ನಿವಾರಿಸಲು **ಶಸ್ತ್ರ** ಚಿಕಿತ್ಸೆಗಾಗಿ ಸರ್ಕಾರಿ ಆಸ್ಪತ್ರೆ ಸಂಜಯಗಾಂಧಿ ಆಸ್ಪತ್ರೆಗಳಲ್ಲಿ, ಹಾಗೂ ಸುಸಜ್ಜಿತ ಖಾಸಗಿ ಆಸ್ಪತ್ರೆಗಳಲ್ಲಿ ಅಂಗವಿಕಲತೆ ನಿವಾರಣಾ **ಶಸ್ತ್ರ** ಚಿಕಿತ್ಸೆಗಾಗಿ ರೂ.1.00 ಲಕ್ಷಗಳವರೆಗೆ ಸಹಾಯ ಧನವನ್ನು ಮಂಜೂರು ಮಾಡಲಾಗುತ್ತಿದೆ.

### 6. ಅಂಧ ವಿದ್ಯಾರ್ಥಿಗಳಿಗೆ ಬ್ರೈಲ್ ಕಿಟ್‌ಗಳು:

2022-23ನೇ ಸಾಲಿನಲ್ಲಿ ಅಂಧ ವಿದ್ಯಾರ್ಥಿಗಳಿಗೆ ಟಾಕಿಂಗ್ ಮೊಬೈಲ್, ಬ್ರೈಲ್ ವಾಚ್ ಒಳಗೊಂಡಂತೆ ಬ್ರೈಲ್ ಕಿಟ್‌ಗಳನ್ನು ಖರೀದಿಸಿ ವಿತರಿಸಲಾಗುತ್ತಿದೆ.

### 7. ಶ್ರವಣದೋಷವುಳ್ಳ ವ್ಯಕ್ತಿಗಳ ಸ್ವಯಂ ಉದ್ಯೋಗಕ್ಕಾಗಿ ಹೊಲಿಗೆ ಯಂತ್ರಗಳು:

ಶ್ರವಣದೋಷವುಳ್ಳ ವ್ಯಕ್ತಿಗಳ ಸ್ವಯಂ ಉದ್ಯೋಗಕ್ಕಾಗಿ ಹೊಲಿಗೆ ಯಂತ್ರಗಳನ್ನು ಖರೀದಿಸಿ ವಿತರಿಸಲಾಗಿದೆ.

8. **ಸಾಧನೆ ಮತ್ತು ಪ್ರತಿಭೆ ಯೋಜನೆ :**

ವಿಕಲಚೇತನರು ನೀಡುವ ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಿ ಧನಸಹಾಯ ನೀಡುವ ಸಲುವಾಗಿ "ಪ್ರತಿಭೆ" ಎಂಬ ಯೋಜನೆಯನ್ನು ಹಾಗೂ ಅಂಗವಿಕಲ ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡಿ ಧನಸಹಾಯ ನೀಡಲು "ಸಾಧನೆ" ಎಂಬ ಯೋಜನೆಯು ಜಾರಿಯಲ್ಲಿದ್ದು, ಕ್ರೀಡೆಗಳಲ್ಲಿ ವಿಶೇಷ ಸಾಧನೆಗೈದ ವಿಕಲಚೇತನರಿಗೆ ರೂ.50,000/-ಗಳ ಧನ ಸಹಾಯವನ್ನು ನೀಡಲಾಗುತ್ತಿದೆ.

**9. ನಿರಾಮಯ ಆರೋಗ್ಯ ವಿಮಾ ಯೋಜನೆ :**

ಬುದ್ಧಿಮಾಂದ್ಯ, ಸೆರೆಬ್ರಲ್ ಪಾಲ್ಸಿ, ಆಟಿಸಂ ಮತ್ತು ಬಹುವಿಧ ಅಂಗವಿಕಲತೆಗೆ ಒಳಗಾದ ಬಡತನ ರೇಖೆಗಿಂತ ಕೆಳಗಿರುವ ಕುಟುಂಬದ ವಿಕಲಚೇತನರಿಗೆ ನಿರಾಮಯ ಎಂಬ ಆರೋಗ್ಯ ವಿಮಾ ಯೋಜನೆಯು ಜಾರಿಯಲ್ಲಿದ್ದು, ಮೇಲೆ ವಿವರಿಸಿದ ಅಂಗವಿಕಲತೆ ಹೊಂದಿರುವ ಪ್ರತಿ ವ್ಯಕ್ತಿಗೆ ವರ್ಷಕ್ಕೆ ಒಂದು ಸಾರಿಗೆ ಪ್ರೀಮಿಯಂ ಮೊತ್ತ ರೂ.250/-ಗಳನ್ನು ಅಧಿಕೃತ ಸಂಸ್ಥೆಗೆ ಪಾವತಿಸಲಾಗುವುದು. ಪ್ರತಿ ವರ್ಷ ಯೋಜನೆಯಡಿ ಬರುವ ಫಲಾನುಭವಿಗಳು ರೂ.1.00 ಲಕ್ಷಗಳವರೆಗೆ ವೈದ್ಯಕೀಯ ಸೌಲಭ್ಯ ಪಡೆಯಬಹುದಾಗಿರುತ್ತದೆ.

**10. ಸ್ಪರ್ಧಾ ಚೇತನ :**

ಈ ಯೋಜನೆಯಡಿ ವಿಶೇಷ ಸಾಮರ್ಥ್ಯ/ಭಿನ್ನ ಸಾಮರ್ಥ್ಯದ ವಿದ್ಯಾವಂತ ವ್ಯಕ್ತಿಗಳಿಗೆ ಐ.ಎ.ಎಸ್./ಕೆ.ಎ.ಎಸ್. ಹಾಗೂ ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸರ್ಕಾರದ ಇತರೆ ಇಲಾಖೆಗಳಡಿ ಗುರುತಿಸಲ್ಪಟ್ಟ ಪೂರ್ವ ಪರೀಕ್ಷಾ ತರಬೇತಿ ಕೇಂದ್ರಗಳು ಹಾಗೂ ಈ ಇಲಾಖೆಯಿಂದ ಗುರುತಿಸಲ್ಪಟ್ಟ ತರಬೇತಿ ಕೇಂದ್ರಗಳ ಮೂಲಕ ತರಬೇತಿಯನ್ನು ಉಚಿತವಾಗಿ ನೀಡಲಾಗುತ್ತಿದೆ.

**11. ವಿಕಲಚೇತನರಿಗೆ ಗುರುತಿನ ಚೀಟಿ ನೀಡುವ ಯೋಜನೆ :**

ಈ ಯೋಜನೆಯಡಿಯಲ್ಲಿ ವಿಕಲಚೇತನ ವ್ಯಕ್ತಿಗಳಿಗೆ ಗುರುತಿನ ಚೀಟಿಗಳನ್ನು ನೀಡಲಾಗುತ್ತಿದೆ. ಈ ಗುರುತಿನ ಚೀಟಿಯನ್ನು ವಿವಿಧ ಸರ್ಕಾರಿ ಸೌಲಭ್ಯಗಳನ್ನು ಪಡೆಯಲು ಉಪಯೋಗಿಸಿಕೊಳ್ಳಬಹುದಾಗಿದೆ. ಭಾರತ ಸರ್ಕಾರದ ವಿಕಲಚೇತನರಿಗೆ ವಿಶಿಷ್ಟ ಗುರುತಿನ ಚೀಟಿ (Unique Disablity Card) ಯೋಜನೆಯನ್ನು ಪ್ರಾರಂಭಿಸಲು ರಾಜ್ಯಾದ್ಯಂತ ವೈದ್ಯಕೀಯ ಮಂಡಳಿಯನ್ನು/ ಪ್ರಾಧಿಕಾರವನ್ನು ಗುರುತಿಸಲಾಗುತ್ತಿದೆ. ಈ ಯೋಜನೆಯಡಿ ರಾಜ್ಯಾದ್ಯಂತ ಒಂದೇ ರೀತಿಯ ಗುರುತಿನ ಚೀಟಿಯನ್ನು ಪಡೆಯಬಹುದಾಗಿದೆ.

**ಟಿಪ್ಪಣಿ:**

1. **ನಿರಾಮಯ ಆರೋಗ್ಯ ವಿಮಾ ಯೋಜನೆಯಡಿ** ಮೊದಲನೇ ವರ್ಷ ಒಂದು ಸಾರಿಗೆ ಪ್ರೀಮಿಯಂ ಮೊತ್ತ ರೂ.250/-ಗಳನ್ನು ಇಲಾಖೆಯಿಂದ ಪಾವತಿಸಲಾಗುತ್ತಿದ್ದು, ರೂ.50/-ಗಳನ್ನು ಮಾತ್ರ ಫಲಾನುಭವಿಯು ನವೀಕರಣಕ್ಕಾಗಿ ಪಾವತಿಸಬೇಕಾಗಿರುತ್ತದೆ.
2. **ಅಂಗವಿಕಲ ಪುರುಷ ಹಾಗೂ ಮಹಿಳೆಯರ ವಸತಿನಿಲಯ:**
   ಬೆಂಗಳೂರಿನಲ್ಲಿ ಮಹಿಳಾ ಮತ್ತು ಪುರುಷ ಅಂಗವಿಕಲ ನೌಕರರು ಮತ್ತು ಪ್ರಶಿಕ್ಷಣಾರ್ಥಿಗಳಿಗೆ ಪ್ರತ್ಯೇಕವಾದ ಒಂದೊಂದು ವಸತಿ ನಿಲಯವನ್ನು ಇಲಾಖೆಯಿಂದ ನಡೆಸಲಾಗುತ್ತಿದೆ. ಉದ್ಯೋಗಸ್ಥ ಪುರುಷರು/ಮಹಿಳೆಯರು ಆಹಾರ ವೆಚ್ಚವನ್ನು ಮಾತ್ರ ಪಾವತಿಸಬೇಕಾಗಿರುತ್ತದೆ.
3. **ಉದ್ಯೋಗಸ್ಥ ವಿಕಲಚೇತನ ಮಹಿಳೆಯರಿಗೆ ವಸತಿ ನಿಲಯಗಳು:**
   ಈ ವಸತಿ ನಿಲಯದಲ್ಲಿ ವಿದ್ಯಾರ್ಥಿನಿಯರು ಹಾಗೂ ತರಬೇತಿದಾರರಿಗೆ ಉಚಿತ ಊಟದ ವ್ಯವಸ್ಥೆಯಿದ್ದು, ಉದ್ಯೋಗಸ್ಥ ಮಹಿಳೆಯರು ಆಹಾರ ವೆಚ್ಚಕ್ಕಾಗಿ ಮಾಸಿಕ 600/-ಗಳನ್ನು ವಸತಿ ನಿಲಯ ನಡೆಸುವ ಸಂಸ್ಥೆಗೆ ಪಾವತಿಸಬೇಕಾಗಿರುತ್ತದೆ.
4. **ಆಧಾರ:**
   ಈ ಯೋಜನೆಯಡಿ ಶೇ.50ರಷ್ಟು ಬ್ಯಾಂಕ್ ಸಾಲ ಮತ್ತು ಶೇ.50ರಷ್ಟು ಸಹಾಯಧನವನ್ನು ಇಲಾಖೆಯಿಂದ ನೀಡಲಾಗುತ್ತದೆ. ಬ್ಯಾಂಕ್ ಸಾಲದ ಕಂತನ್ನು ಮಾತ್ರ ಫಲಾನುಭವಿಯು ಪಾವತಿಸಬೇಕಾಗಿರುತ್ತದೆ.